KACM300005622016

Presented on : 12-08-2016
Registered on : 12-08-2016
Decided on : 27-07-2026
Duration : 9 years, 11 months, 15 days

***ಪ್ರಥಮ ದರ್ಜೆ ನ್ಯಾಯಿಕಾ ದಂಡಾಧಿಕಾರಿಯವರ ನ್ಯಾಯಾಲಯ ಃ ಕೊಪ್ಪ***

**ಉಪಸ್ಥಿತರುಃ ಶ್ರೀಮತಿ ನಂದಿನಿ ಎಂ.ಎನ್. , ಬಿ.ಎ., ಎಲ್ ಎಲ್.ಬಿ.,**

**ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ಕೊಪ್ಪ**

**ದಿನಾಂಕ 27 ನೇ ಜುಲೈ ಮಾಹೆ 2026**

**ಸಿ.ಸಿ. ನಂಃ 324/2016**

ಫಿರ್ಯಾದಿ : ಸರ್ಕಾರದ ಪರವಾಗಿ ಆರ್.ಎಫ್.ಒ., ಕೊಪ್ಪ.

(ಸಹಾಯಕ ಸರ್ಕಾರಿ ಅಭಿಯೋಜಕರು)

**- ವಿರುದ್ಧ -**

| | | |
|---|---|---|
| ***ಆರೋಪಿಃ*** | | ಎಂ. ಮಂಜುನಾಥ ಬಿನ್ ಮರಿಯಪ್ಪ ನಾಯ್ಕ, ಸೀಗೋಡು, ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ. |
| | | **(ಆರೋಪಿ ಪರವಾಗಿ ಶ್ರೀ ಹೆಚ್.ಎಸ್.ಎ., ವಕೀಲರು)** |

| | | | |
|---|---|---|---|
| 1 | ಅಪರಾಧ ನಡೆದ ದಿನಾಂಕ | ಃ | 17.10.1994 |
| 2 | ಅಪರಾಧ ವರದಿಯಾದ ದಿನಾಂಕ | ಃ | 17.10.1994 |
| 3 | ಫಿರ್ಯಾದುದಾರರ ಹೆಸರು | ಃ | ವಲಯ ಅರಣ್ಯಾಧಿಕಾರಿಗಳು, ಕೊಪ್ಪ. |
| 4 | ಆರೋಪಿ ಬಂಧನದ ದಿನಾಂಕ | ಃ | ---- |
| 5 | ಸಾಕ್ಷ್ಯ ವಿಚಾರಣೆ ಪ್ರಾರಂಭಿಸಿದ ದಿನಾಂಕ | ಃ | 05.09.1995 |
| 6 | ಸಾಕ್ಷ್ಯ ವಿಚಾರಣೆ ಮುಕ್ತಾಯ ಗೊಳಿಸಿದ ದಿನಾಂಕ | ಃ | 10.10.1995 |

Visit **ecourts.gov.in** for updates or download mobile app "**eCourts Services**" from Android or iOS

| | | | |
|---|---|---|---|
| 7 | ಆರೋಪಿಸಿರುವ ಅಪರಾಧಗಳು | | ಕರ್ನಾಟಕ ಅರಣ್ಯ ಕಾಯ್ದೆ ಕಲಂ 86 ಮತ್ತು 87 ಸಹ ಕಲಂ ಭಾ.ದಂ.ಸಂ. ಕಲಂ 379. |
| 8 | ನ್ಯಾಯಾಧೀಶರ ತೀರ್ಮಾನ | ಃ | ಕರ್ನಾಟಕ ಅರಣ್ಯ ಕಾಯ್ದೆ ಕಲಂ 86 ಮತ್ತು 87 ಸಹ ಕಲಂ ಭಾ.ದಂ. ಸಂ . ಕಲಂ 379ರ ಅಪರಾಧಕ್ಕೆ ಆರೋಪಿಯು ನಿರ್ದೋಷಿ ಆಗಿರುತ್ತಾರೆ. |
| 9 | ಫಿರ್ಯಾದುದಾರರನ್ನು ಪ್ರತಿನಿಧಿಸಿದವರು | ಃ | ಸ.ಸ.ಅ. |
| 10 | ಪ್ರತಿನಿಧಿಸಿದವರು ಆರೋಪಿತರ ಪರ | ಃ | **ಆರೋಪಿಯ ಪರವಾಗಿ**<br>**ಶ್ರೀ ಹೆಚ್.ಎಸ್.ಎ. , ವಕೀಲರು.** |

ಸಹಿ/- xxxxx27/07/2026
(ಶ್ರೀಮತಿ ನಂದಿನಿ ಎಂ.ಎನ್.)
ಸಿವಿಲ್‌ನ್ಯಾಯಾಧೀಶರು ಮತ್ತು
ಪ್ರದನ್ಯಾದಂಃ ಕೊಪ್ಪ.

**ತೀ ರ್ಪು**

ಆರ್.ಎಫ್.ಒ., ಕೊಪ್ಪ, ಇವರು ಮೂಲ ಪ್ರಕರಣ ಸಿ.ಸಿ. ಸಂಖ್ಯೆ 319/1995ರಲ್ಲಿನ 5ನೇ ಆರೋಪಿ ಎಂ. ಮಂಜುನಾಥ ಬಿನ್ ಮರಿಯಪ್ಪ ನಾಯ್ಕ, ವಾಸ ಸೀಗೋಡು, ಕೊಪ್ಪ ತಾಲ್ಲೂಕು, ರವರು ಕರ್ನಾಟಕ ಅರಣ್ಯ ಕಾಯ್ದೆ ಕಲಂ 86 ಮತ್ತು 87 ಸಹ ಕಲಂ ಭಾ.ದಂ.ಸಂ. ಕಲಂ 379ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆಂದು ಆರೋಪಿಸಿ ಪ್ರತ್ಯೇಕಿತ ದೋಷಾರೋಪಣಾ ಪತ್ರವನ್ನು ಈ ಪ್ರಕರಣದಲ್ಲಿ ಸಲ್ಲಿಸಿರುತ್ತಾರೆ.

Visit **ecourts.gov.in** for updates or download mobile app “**eCourts Services**” from Android or iOS

**2. ಅಭಿಯೋಜನೆಯವರ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ.**

ಮೂಲ ಸಿ.ಸಿ. ಸಂಖ್ಯೆ:319/1995 ರಲ್ಲಿನ ಅಭಿಯೋಜನೆ ಪ್ರಕರಣದ ಸಾರಾಂಶವೇನೆಂದರೆ ದಿನಾಂಕ 17.10.1994 ರಂದು, ಮುಂಜಾನೆ, ಚಾಸಾ-1 ರಿಂದ ಚಾಸಾ-9 ಅರಣ್ಯ ಅಧಿಕಾರಿಗಳು, ಕ್ಲಾಸಿಕ್ ಪ್ಲಾಂಟೇಶನ್ ಬಳಿಯ ಕೊಪ್ಪ-ತೀರ್ಥಹಳ್ಳಿ ರಸ್ತೆಯಲ್ಲಿ ಕಾಯುತ್ತಿದ್ದಾಗ, ಆ ಸಮಯದಲ್ಲಿ ಒಂದು ವಾಹನ ಕೊಪ್ಪ ಕಡೆಯಿಂದ ಬಂದಿದ್ದು, ಅದನ್ನು ತಡೆದು ನಿಲ್ಲಿಸಿ ವಿಚಾರಣೆ ಮಾಡಲಾಗಿ ಸದರಿ ವಾಹನದ ಚಾಲಕ, ಅಂದರೆ, ಆರೋಪಿ-1 ರವರು ಸದರಿ ವಾಹನದಲ್ಲಿ ರಾಸಾಯನಿಕ ಗೊಬ್ಬರವಿದೆ ಎಂದು ಹೇಳಿದ್ದು, ಸದರಿ ವಾಹನಕ್ಕೆ ಮುಚ್ಚಿದ ಟಾರ್ಪಾಲ್ ಅನ್ನು ತೆಗೆದು ಹಾಕಿದಾಗ, ಕೆಲವು ಬೂದಿ ಚೀಲಗಳು ಕಂಡುಬಂದಿದ್ದು, ಅವುಗಳ ಕೆಳಗೆ ಮರದ ತುಂಡುಗಳು ಕಂಡುಬಂದವು. ಅಲ್ಲದೇ ವಾಸನೆಯ ಆಧಾರದ ಮೇಲೆ ಅವುಗಳನ್ನು ಶ್ರೀಗಂಧದ ತುಂಡುಗಳೆಂದು ಗುರುತಿಸಿದ್ದು, ಸದರಿ ಶ್ರೀಗಂಧದ ತುಂಡುಗಳು ಇಲಾಖಾ ಮುದ್ರೆಯನ್ನು ಹೊಂದಿಲ್ಲ. ಇದಲ್ಲದೆ, ಆರೋಪಿ-1, 2 ಮತ್ತು ತಲೆಮರೆಸಿಕೊಂಡಿರುವ ಆರೋಪಿ-3 ವಾಹನದಲ್ಲಿದ್ದರು. ವಿಚಾರಣೆಯಲ್ಲಿ ಅವರು ಶ್ರೀಗಂಧದ ತುಂಡುಗಳನ್ನು ಹೊಂದಲು ಮತ್ತು ಸಾಗಿಸಲು ಯಾವುದೇ ಪರವಾನಗಿಯನ್ನು ತೋರಿಸಿರುವುದಿಲ್ಲ. ಆದ್ದರಿಂದ, ವಾಹನದಲ್ಲಿ ಕಂಡುಬಂದ 196 ಶ್ರೀಗಂಧದ ತುಂಡುಗಳನ್ನು, ವಾಹನ ಮತ್ತು ಇತರ ಸಾಮಗ್ರಿಗಳೊಂದಿಗೆ ವಶಪಡಿಸಿಕೊಂಡಿರುವುದಾಗಿ ಹಾಗೂ ತನಿಖಾಧಿಕಾರಿಗಳು ಆರೋಪಿ-1 ರಿಂದ 3 ರ ಸ್ವಇಚ್ಛಾ ಹೇಳಿಕೆಗಳನ್ನು ದಾಖಲಿಸಿದ್ದು, ಸದರಿ ಹೇಳಿಕೆಯಲ್ಲಿ 4 ಮತ್ತು 5 ನೇ ಆರೋಪಿತರು 4 ನೇ ಆರೋಪಿ ಮನೆಯ ಹತ್ತಿರದಿಂದ ಶ್ರೀಗಂಧದ ತುಂಡುಗಳನ್ನು ವಾಹನಕ್ಕೆ ಲೋಡ್ ಮಾಡಿದ್ದಾರೆ ಎಂದು 2 ನೇ ಆರೋಪಿ ಹೇಳಿಕೆಯಲ್ಲಿ ಹೇಳಿದ್ದು,

Visit **ecourts.gov.in** for updates or download mobile app "**eCourts Services**" from Android or iOS

ಸದರಿ ಮಾಹಿತಿಯ ಆಧಾರದ ಮೇಲೆ, ಅರಣ್ಯ ಅಧಿಕಾರಿಗಳು ಆರೋಪಿ 4 ರವರ ಮನೆಗೆ ಹೋಗಿ ಆರೋಪಿ 4 ರವರನ್ನು ಬಂಧಿಸಿದ್ದು, ಮತ್ತು 4 ನೇ ಆರೋಪಿಯ ಮಾವನ ಕಾಫಿ ತೋಟದಿಂದ ಶ್ರೀಗಂಧದ ತುಂಡುಗಳನ್ನು ಲೋಡ್ ಮಾಡಿರುವ ಕೆಲವು ಗುರುತುಗಳನ್ನು ಸಹ ಕಂಡುಕೊಂಡಿದ್ದು, ಅರಣ್ಯ ಅಧಿಕಾರಿಗಳು ವಾಹನ ಮತ್ತು ಶ್ರೀಗಂಧದ ತುಂಡುಗಳನ್ನು ವಶಪಡಿಸಿಕೊಂಡ ಸ್ಥಳದಲ್ಲಿ ಮಹಜರನ್ನು ಮತ್ತು 4 ನೇ ಆರೋಪಿಯ ಮನೆಯ ಬಳಿ ಇನ್ನೊಂದು ಮಹಜರನ್ನು ಬರೆದಿರುತ್ತಾರೆ. ಆರೋಪಿಗಳು ಸರ್ಕಾರಿ ಅರಣ್ಯದಿಂದ ಶ್ರೀಗಂಧದ ತುಂಡುಗಳನ್ನು ಅಕ್ರಮವಾಗಿ ಕತ್ತರಿಸಿ ತೆಗೆದು ಯಾವುದೇ ಪರವಾನಗಿ ಇಲ್ಲದೆ ಅಕ್ರಮವಾಗಿ ಸಾಗಿಸಿದ್ದಾರೆ ಎಂದು ಆರೋಪಿಸಿ ಆರೋಪಿತರ ವಿರುದ್ಧ ಮೂಲ ಪ್ರಕರಣ ಸಿ.ಸಿ. ಸಂಖ್ಯೆ 319/1995 ರಲ್ಲಿ ದೋಷಾರೋಪಣಾ ಪತ್ರವನ್ನು ಸಲ್ಲಿಸಲಾಗಿದ್ದು, ಆ ಪ್ರಕಾರವಾಗಿ ಸದರಿ ಮೂಲ ಪ್ರಕರಣದ 5 ನೇ ಆರೋಪಿಯಾದ ಮಂಜುನಾಥ ಎಂ. ರವರ ವಿರುದ್ಧ ಈ ಪ್ರಕರಣದಲ್ಲಿ ಪ್ರತ್ಯೇಕಿತ ದೋಷಾರೋಪಣಾ ಪತ್ರವನ್ನು ಸಲ್ಲಿಸಲಾಗಿರುತ್ತದೆ.

3. ಆರೋಪಿಯು (ಮೂಲ ಪ್ರಕರಣದ 5 ನೇ ಆರೋಪಿ) ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ನಂತರ, ಕರ್ನಾಟಕ ಅರಣ್ಯ ಕಾಯ್ದೆ ಕಲಂ 86 ಮತ್ತು 87 ಸಹ ಕಲಂ ಭಾ.ದಂ. ಸಂ. ಕಲಂ 379 ರ ಅಪರಾಧಕ್ಕೆ ದೋಷಾರೋಪಣೆಯನ್ನು ರಚಿಸಿ, ಆರೋಪಿಗೆ ಓದಿ ಹೇಳಲಾಗಿದ್ದು, ಆರೋಪಿಯು ದೋಷಾರೋಪಣೆಯನ್ನು ಅಲ್ಲಗಳೆದು ವಿಚಾರಣೆಯಾಗಬೇಕೆಂದು ತಿಳಿಸಿರುತ್ತಾರೆ.

Visit **ecourts.gov.in** for updates or download mobile app "**eCourts Services**" from Android or iOS

4. ನಂತರ ಈ ಪ್ರಕರಣದಲ್ಲಿ ಆರೋಪಿಯು ತಮ್ಮ ವಕೀಲರ ಮೂಲಕ ಹಾಜರಾಗಿ ಜಾಮೀನು ಅರ್ಜಿಯನ್ನು ಸಲ್ಲಿಸಿ, ಸದರಿ ಜಾಮೀನು ಅರ್ಜಿ ಮೇರೆಗೆ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿರುತ್ತದೆ. ಅಭಿಯೋಜನೆಯವರು ಮೂಲ ಪ್ರಕರಣ ಸಿ.ಸಿ.319/1995 ರಲ್ಲಿ ಮಾಡಿರುವ ಸಾಕ್ಷಿ ವಿಚಾರಣೆಯನ್ನು ಈ ಪ್ರಕರಣದಲ್ಲಿ ಅಳವಡಿಸಿಕೊಳ್ಳಲು ಮೆಮೊ ಅನ್ನು ಸಲ್ಲಿಸಿದ್ದು, ಅದರಂತೆ ಸದರಿ ಸಾಕ್ಷಿ ವಿಚಾರಣೆಯನ್ನು ಅಳವಡಿಸಿಕೊಳ್ಳಲಾಗಿರುತ್ತದೆ.

5. ಮೂಲ ಪ್ರಕರಣ ಸಿ.ಸಿ. ಸಂಖ್ಯೆ 319/1995 ರಲ್ಲಿ ಅಭಿಯೋಜನೆಯವರು 4 ಸಾಕ್ಷಿದಾರರನ್ನು ಪ್ರಾಸಾ-1 ರಿಂದ ಪ್ರಾಸಾ-4 ಎಂದು, ವಿಚಾರಣೆಗೊಳಪಡಿಸಿ 9 ದಾಖಲಾತಿಗಳನ್ನು ನಿಪಿ-1 ರಿಂದ ನಿಪಿ-9 ಎಂದು ಹಾಗೂ ಮುದ್ದೆಮಾಲು-1 ಮತ್ತು 2 ಗಳನ್ನು ಗುರುತಿಸಿಕೊಂಡಿರುತ್ತಾರೆ. ನಂತರ ಅ.ಪ್ರ.ಸಂ. ಕಲಂ 313 ರ ಅಡಿಯಲ್ಲಿ ಆರೋಪಿಯ ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಯಿತು. ಆರೋಪಿಯು ಅವರ ವಿರುದ್ದದ ಅಭಿಯೋಜನೆಯ ಸಾಕ್ಷಿದಾರರ ಸಾಕ್ಷ್ಯವನ್ನು ಸಂಪೂರ್ಣವಾಗಿ ಸುಳ್ಳು ಎಂದು ಅಲ್ಲಗಳೆದಿದ್ದು ಆರೋಪಿಯ ಪರವಾಗಿ ಯಾವುದೇ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿರುವುದಿಲ್ಲ.

6. ವಾದವನ್ನು ಕೇಳಲಾಯಿತು ಮತ್ತು ದಾಖಲೆಗಳನ್ನು ಪರಿಶೀಲಿಸಲಾಯಿತು.

7. ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ಈ ಕೆಳಕಂಡ ಅಂಶಗಳು ನನ್ನ ತೀರ್ಮಾನಕ್ಕೆ ಉದ್ಭವಿಸುತ್ತದೆಃ

1. ದಿನಾಂಕ 17.10.1994 ರಂದು ಬೆಳಿಗ್ಗೆ 8-00 ಗಂಟೆ ಸಮಯದಲ್ಲಿ ಕೊಪ್ಪ -ತೀರ್ಥಹಳ್ಳಿ ರಸ್ತೆಯಲ್ಲಿ ಕ್ಲಾಸಿಕ್ ಪ್ಲಾಂಟೇಷನ್ ಹತ್ತಿರ ಆರೋಪಿಯು ಮೂಲಕ ಪ್ರಕರಣದ ಇತರೆ ಆರೋಪಿತರೊಂದಿಗೆ 1095 ಕೆ.ಜಿ. ತೂಕದ 196 ಶ್ರೀಗಂಧದ ತುಂಡುಗಳನ್ನು ಸರ್ಕಾರಿ ಕಾಡಿನಿಂದ ಅಪ್ರಾಮಾಣಿಕತದಿಂದ ಕಳವು ಮಾಡಿ, ಅವುಗಳನ್ನು ತುಂಡುಗಳನ್ನಾಗಿ ಕಡಿತಲೆ ಮಾಡಿ ಎಂ.ಹೆಚ್.12/ಕ್ಯೂ-2357 ನೇ ಸಂಖ್ಯೆಯ ಕ್ಯಾಂಟರ್ ವಾಹನದಲ್ಲಿ ಅಕ್ರಮವಾಗಿ ಸಾಗಾಣಿಕೆ ಮಾಡಿ, ಕರ್ನಾಟಕ ಅರಣ್ಯ ಕಾಯ್ದೆ ಕಲಂ 86, 87 ಸಹ ಕಲಂ ಭಾ.ದಂ. ಸಂ. 379 ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಎಸೆರುತ್ತಾರೆ ಎಂಬುದನ್ನು ಅಭಿಯೋಜನೆಯವರು ಸಂಶಯರಹಿತವಾಗಿ ಸಾಬೀತುಪಡಿಸುತ್ತಾರೆಯೇ?

2. ಯಾವ ಆದೇಶ?

8. ನ್ಯಾಯಾಲಯದ ಮುಂದೆ ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯಗಳ ಆಧಾರದ ಮೇಲೆ ಮೇಲ್ಕಂಡ ಅಂಶಕ್ಕೆ ಈ ಕೆಳಕಂಡಂತೆ ಉತ್ತರಿಸಿರುತ್ತೇನೆ.

ಅಂಶ-1 ಃ ನಕಾರಾತ್ಮಕವಾಗಿ

ಅಂಶ-2 ಃ ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಕ್ಕಾಗಿ,

**ಃಕಾ ರ ಣ ಗ ಳುಃ**

9. **ಅಂಶ-1ಃ** ಮೂಲ ಪ್ರಕರಣ ಸಿ.ಸಿ. ಸಂಖ್ಯೆ 319/1995 ರಲ್ಲಿ ಅಭಿಯೋಜನೆಯವರು 4 ಸಾಕ್ಷಿದಾರರನ್ನು ಪ್ರಾಸಾ-1 ರಿಂದ ಪ್ರಾಸಾ-4 ಎಂದು, ವಿಚಾರಣೆಗೊಳಪಡಿಸಿ 9 ದಾಖಲಾತಿಗಳನ್ನು ನಿಪಿ-1 ರಿಂದ ನಿಪಿ-9 ಎಂದು ಹಾಗೂ

ಮುದ್ದೆಮಾಲು-1 ಮತ್ತು 2 ಗಳನ್ನು ಗುರುತಿಸಿಕೊಂಡಿರುತ್ತಾರೆ. ನಿಪಿ.1 ಮತ್ತು ನಿಪಿ.2 ಮಹಜರ್ ಗಳು, ನಿಪಿ.3 ಶ್ರೀಗಂಧವನ್ನು ಪರೀಕ್ಷಿಸಲಾದ ಪ್ರಮಾಣಪತ್ರವಾಗಿರುತ್ತದೆ. ನಿಪಿ.4 ಚಾರ್ ಮಿನಾರ್ ಸಿಗರೇಟ್ ಪ್ಯಾಕ್ ಪೇಪರ್, ನಿಪಿ.5, 1 ನೇ ಆರೋಪಿಯ ಹೇಳಿಕೆ, ನಿಪಿ.6, 2 ನೇ ಆರೋಪಿಯ ಹೇಳಿಕೆ, ನಿಪಿ.7, 3 ನೇ ಆರೋಪಿಯ ಹೇಳಿಕೆ, ನಿಪಿ.8, 4 ನೇ ಆರೋಪಿಯ ಹೇಳಿಕೆಗಳು ಹಾಗೂ ನಿಪಿ.9, ವರದಿ ಆಗಿರುತ್ತದೆ.

10. ಈ ಪ್ರಕರಣದಲ್ಲಿ ತನಿಖಾಧಿಕಾರಿಗಳಾದ ಪ್ರಾಸಾ.1 ಹೆಚ್.ಆರ್. ಕುಮಾರ್ ರವರು ಮೂಲ ಪ್ರಕರಣ ಸಿ.ಸಿ. ಸಂಖ್ಯೆ 319/1995 ರಲ್ಲಿ ದಿನಾಂಕಃ 17.10.1994 ರಂದು ಬೆಳಿಗ್ಗೆ 4 ಗಂಟೆ ಸಮಯದಲ್ಲಿ ತಾನು, ಚಾಸಾ.1, 3 ರಿಂದ 6 ರವರು ಕೊಪ್ಪ ತೀರ್ಥಹಳ್ಳಿ ರಸ್ತೆಯಲ್ಲಿ ಗಸ್ತಿನಲ್ಲಿದ್ದೇವೆಂತಲೂ, ಆ ದಿನ ಬೆಳಗಿನ ಜಾವ 4 ಗಂಟೆಯಿಂದ ಕ್ಲಾಸಿಕ್ ಪ್ಲಾಂಟೇಷನ್ ಹತ್ತಿರ ಕಾಯುತ್ತಿದ್ದಾಗ ಕೊಪ್ಪ ಕಡೆಯಿಂದ ತೀರ್ಥಹಳ್ಳಿ ಕಡೆಗೆ ಸುಮಾರು 7-30 ರ ಸಮಯದಲ್ಲಿ ಒಂದು ಐಶ್ಚರ್ ಮಿತ್‌ಸುಬಿಶಿ ಕ್ಯಾಂಟರ್ ಲಾರಿ ನಂಬರ್ ಎಂ.ಹೆಚ್ಃ12-ಕ್ಯೂ-2357 ಬಂತು, ಅದನ್ನು ನಿಲ್ಲಿಸಲು ತಾವು ಕೈ ಸೂಚನೆ ಕೊಟ್ಟೆವೆಂತಲೂ, ಚಾಲಕ ವಾಹನವನ್ನು ನಿಲ್ಲಿಸಿದನೆಂತಲೂ, ಅದರಲ್ಲಿ ಏನು ಇದೆ ಎಂದು ಎಂದು ಕೇಳಲಾಗಿ, ಕೆಮಿಕಲ್ ಇದೆ ಅಂತ ಹೇಳಿದರೆಂದು, ಅದನ್ನು ತಪಾಸಣೆ ಮಾಡಲು ಅದರ ಮೇಲೆ ಹಾಕಿದ್ದ ಟಾರ್ಪಾಲನ್ನು ಸಿಬ್ಬಂದಿ ಸಹಾಯದಿಂದ ಬಿಚ್ಚಿದೆವು ಎಂದು, ಮೇಲ್ಭಾಗದಲ್ಲಿ ಭತ್ತದ ಬೂದಿ ತುಂಬಿರುವ ಚೀಲಗಳು ಇದ್ದವು ಎಂದು, ಸದರಿ ಚೀಲಗಳನ್ನು ತೆಗೆದು ನೋಡಲಾಗಿ ಕೆಳಗಡೆ ಮರದ ತುಂಡುಗಳು ಕಂಡು ಬಂದವು ಎಂದು, ಸದರಿ ಲಾರಿಯಲ್ಲಿ 3 ಜನರಿದ್ದರು, ತಾವು ಈ ರೀತಿ ಮಾಡುವಾಗ ಅವರು ಓಡಲು ಪ್ರಯತ್ನಿಸಿದರು, ಅವರನ್ನು ತಮ್ಮ ಸಿಬ್ಬಂದಿಗಳು ಹಿಡಿದುಕೊಂಡರೆಂದು,

Visit **ecourts.gov.in** for updates or download mobile app "**eCourts Services**" from Android or iOS

ಲಾರಿಯಲ್ಲಿದ್ದ ಕಟ್ಟಿಗೆ ತುಂಡುಗಳನ್ನು ಪರಿಶೀಲಿಸಿ ನೋಡಲಾಗಿ, ಅವು ಶ್ರೀಗಂಧ ತುಂಡುಗಳಾಗಿದ್ದವು ಎಂದು, ಅವುಗಳನ್ನು ಹೊಂದಿದ ಬಗ್ಗೆ ಅಥವಾ ಸಾಗಿರುವ ಬಗ್ಗೆ ರಹದಾರಿ ಕೇಳಲಾಗಿ ಇಲ್ಲ ಅಂತ ಹೇಳಿದರೆಂದು, ಅವರ ಹೆಸರು ವಿಳಾಸ ವಿಚಾರಿಸಲಾಗಿ, ಅದರ ಚಾಲಕ ತನ್ನ ಹೆಸರು ಯುವರಾಜ ಮಹಾಮುಣಿ ಅಂತ ಹೇಳಿದರೆಂದು, ಮತ್ತು ಇನ್ನೊಬ್ಬ ಬಾಲು ಅಂತ ಹೇಳಿದರೆಂದು, ಮತ್ತೊಬ್ಬ ಮೊಯಿದ್ದೀನಿ ಅಂತ ಹೇಳಿದರೆಂದು, ನ್ಯಾಯಾಲಯದ ಮುಂದಿರುವ 1 ಮತ್ತು 2 ನೇ ಆರೋಪಿತರು ಆ ದಿನ ತಾವು ಹಿಡಿದ ಯುವರಾಜ್ ಮಹಾಮುನಿ ಮತ್ತು ಬಾಲು ರವಾಗಿದ್ದಾರೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ನಂತರ ಸದರಿ ಲಾರಿಯಲ್ಲಿದ್ದ ಗಂಧದ ತುಂಡುಗಳನ್ನು ಕೆಳಗೆ ಇಳಿಸಲಾಗಿ 196 ತುಂಡು ಇದ್ದವು ಮತ್ತು ಎರಡು ಗೋಣಿಚೀಲದಲ್ಲಿ ಗಂಧದ ಚೆಕ್ಕೆಗಳಿದ್ದವು ಎಂದು, ಸದರಿ ಗಂಧದ ತುಂಡುಗಳನ್ನು ಅಳತೆ ಮಾಡಿ ಅವುಗಳ ಮೇಲೆ ಕೆ ಎನ್ ಎಫ್ ಡಿ ಅನ್ನುವ ಹ್ಯಾಮರ್ ಗುರುತು ಹಾಕಿದೆವೆಂದು, ಅವುಗಳಿಗೆಲ್ಲಾ ಕ್ರಮ ಸಂಖ್ಯೆ ಕೊಟ್ಟೆವೆಂದು, ಅಲ್ಲಿಗೆ ಚಾಸಾ.1 ರವರು ತಮ್ಮ ಕಚೇರಿಯ ಅಪರಾಧ ಸಂಖ್ಯೆ ತರಿಸಿ ಎಫ್.ಒ.ಸಿ.50/94-95, ಕೊಪ್ಪ ಅಂತ ಬರೆಯಲಾಯಿತು ಎಂದು ನುಡಿದಿರುತ್ತಾರೆ.

11. ಸದರಿ ಸಾಕ್ಷಿಯು ಮುಂದುವರೆದು ತಮ್ಮ ಮುಖ್ಯ ವಿಚಾರಣೆಯಲ್ಲಿ ಮೊಹಿದ್ದೀನ್ (3 ನೇ ಆರೋಪಿ) ಸದರಿ ಕಟ್ಟಿಗೆಯನ್ನು 4 ನೇ ಆರೋಪಿಯ ಮನೆಯ ಹತ್ತಿರದಿಂದ ಹೇರಿಕೊಂಡು ಬಂದಿದ್ದೆವು ಅಂತ ಹೇಳಿದನೆಂದು, ಮತ್ತು ತನ್ನ ಜೊತೆಗೆ ಬಂದರೆ ಸದರಿ ಜಾಗವನ್ನು ತೋರಿಸುತ್ತೇನೆಂದು ಹೇಳಿದನೆಂತಲೂ, ನಂತರ ಸದರಿ ಗಂಧದ ತುಂಡುಗಳನ್ನು ವಶಪಡಿಸಿಕೊಂಡು ಆ ಬಗ್ಗೆ 8 ರಿಂದ 11 ಗಂಟೆವರೆಗೆ ಮಹಜರ್ ಕ್ರಮ ಜರುಗಿಸಿದೆವೆಂತಲೂ, ಸದರಿ ಮಹಜರಿಗೆ ತಾನು ಸಹಿ

Visit **ecourts.gov.in** for updates or download mobile app "**eCourts Services**" from Android or iOS

ಮಾಡಿದ್ದೇನೆಂದು ನುಡಿದು ಸದರಿ ಮಹಜರನ್ನು ನಿಪಿ.1 ಎಂದು, ತನ್ನ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಿಕೊಂಡಿರುತ್ತಾರೆ. ಮುಂದುವರೆದು ನಂತರ ಆರೋಪಿತರನ್ನು ವಶಪಡಿಸಿಕೊಂಡು, ವಾಹನ ಮತ್ತು ಗಂಧದ ತುಂಡುಗಳನ್ನು ತಮ್ಮ ಕಚೇರಿಯ ಆವರಣಕ್ಕೆ ತೆಗೆದುಕೊಂಡು ಬಂದೆವೆಂದು, ನಂತರ ಸದರಿ ಮೊಯಿದ್ದೀನ್ ತನ್ನನ್ನು ಚಾಸಾ.1, 3 ರಿಂದ 6 ರನ್ನು ಸೀಗೋಡು ಗ್ರಾಮಕ್ಕೆ ಕರೆದುಕೊಂಡು ಹೋದರೆಂತಲೂ, ಅಲ್ಲಿ 4 ನೇ ಆರೋಪಿಯ ಮಾವ, ಮರಿಯಪ್ಪ ನಾಯಕನ ಮನೆಯ ಹತ್ತಿರ ಕರೆದುಕೊಂಡು ಹೋಗಿದ್ದು, ಅಲ್ಲಿ 4 ನೇ ಆರೋಪಿ ಅಲ್ಲಿಗೆ ಬಂದರು ಎಂದು, 4 ನೇ ಆರೋಪಿಯು ತನಗೂ ಪ್ರಕರಣಕ್ಕೂ ಸಂಬಂಧವಿಲ್ಲ ಅಂತ ಓಡಿ ಹೋಗಲು ಪ್ರಯತ್ನಿಸಿದರೆಂತಲೂ, ಆಗ ತಮ್ಮ ಸಿಬ್ಬಂದಿಯವರು ಬೆನ್ನಟ್ಟಿ ಅವರನ್ನು ಹಿಡಿದರೆಂತಲೂ, ನಂತರ ವಿಚಾರಿಸಲಾಗಿ 1 ರಿಂದ 3 ನೇ ಆರೋಪಿತರು ತೆಗೆದುಕೊಂಡು ಹೋದ ವಾಹನದಲ್ಲಿ ಗಂಧದ ತುಂಡುಗಳನ್ನು ಹೇರಿ ಕಳಿಸಿದ್ದು ನಿಜ ಅಂತ ಹೇಳಿ ಮನೆಯಿಂದ 100 ಮೀಟರ್ ದೂರದಲ್ಲಿ ಒಂದು ಜಾಗಗಕ್ಕೆ ಕರೆದುಕೊಂಡು ಹೋಗಿದ್ದು, ಅಲ್ಲಿ ಸ್ಥಳ ಪರಿಶೀಲಿಸಲಾಗಿ ಸ್ಥಳದಲ್ಲಿ ಸಿಗರೇಟ್ ಪ್ಯಾಕ್ ಹಾಳೆಯಲ್ಲಿ ವಾಹನ ಸಂಖ್ಯೆ ಎಂ.ಹೆಚ್ಃ12/ಕ್ಯೂ-2350 ಅಂತ ಬರೆದಿತ್ತು, ಸ್ಥಳದಲ್ಲಿ ಶ್ರೀಗಂಧದ ಚೆಕ್ಕೆಗಳು ಕಂಡುಬಂದವು, ಸದರಿ ಸಿಗರೇಟ್ ಪ್ಯಾಕ್ ಹಾಳೆಯನ್ನು ಅಮಾನತ್ತುಪಡಿಸಿಕೊಂಡು ಅಲ್ಲಿಯೇ ಒಂದು ಮಹಜರ್ ತಯಾರಿಸಿದ್ದು ಆ ಮಹಜರನ್ನು 11 ರಿಂದ 11-45 ರವರೆಗೆ ಬರೆಯಲಾಯಿತು ಎಂದು ನುಡಿಯುತ್ತಾರೆ. ಮುಂದುವರೆದು ತಾನು ಅದಕ್ಕೆ ಸಹಿ ಮಾಡಿದ್ದೇನೆಂದು ನುಡಿದು ಮಹರನ್ನು ನಿಪಿ.2 ಎಂದು, ತನ್ನ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಿಕೊಂಡಿರುತ್ತಾರೆ. ಮುಂದುವರೆದು ಆ ದಿನ ಲಾರಿಯಿಂದ ವಶಪಡಿಸಿಕೊಂಡ

ಗಂಧದ ತುಂಡು, ಚೆಕ್ಕೆ ಸೇರಿ ಒಟ್ಟು 1095 ಕೆ.ಜಿ. ತೂಕವಿತ್ತು, ಸ್ಟ್ರಿಂಗ್ ಬ್ಯಾಲೆನ್ಸ್ ಸಹಾಯದಿಂದ ಸ್ಥಳದಲ್ಲಿಯೇ ತೂಕ ಮಾಡಿದ್ದೇವೆಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

12. ಸದರಿ ಸಾಕ್ಷಿಯು ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ಆ ದಿನ ವಶಪಡಿಸಿಕೊಂಡ ಗಂಧದ ತುಂಡುಗಳನ್ನು ಗುರುತಿಸಬಲ್ಲೆ ಎಂದು ನುಡಿದು ನ್ಯಾಯಾಲಯದ ಮುಂದಿರುವ ಒಂದು ದಪ್ಪನೆ ಮತ್ತು ಒಂದು ತೆಳುವಾದ ಗಂಧದ ತುಂಡುಗಳು ಆ ದಿನ ಅಮಾನತ್ತು ಪಡಿಸಿಕೊಂಡ ಗಂಧದ ತುಂಡುಗಳ ಪೈಕಿಯಾಗಳಾಗಿವೆಂದು, ದಪ್ಪನೆಯದು 1ನೇ ಕ್ರಮ ಸಂಖ್ಯೆಯುಳ್ಳದ್ದಾಗಿದ್ದು, ತೆಳ್ಳನೆಯದು 196ನೇ ಕ್ರಮಸಂಖ್ಯೆಯನ್ನು ಹೊಂದಿರುತ್ತದೆಂದು ನುಡಿದು, ಅವುಗಳನ್ನು ಮುದ್ದೆ ಮಾಲು-1 ಮತ್ತು 2 ಎಂದು ಗುರುತಿಸಿಕೊಂಡಿರುತ್ತಾರೆ. ಮುಂದುವರೆದು ಅದೇ ದಿನ ಚಾಸಾ.1ರವರು ವಶಪಡಿಸಿಕೊಂಡ ಕಟ್ಟಿಗೆ ತುಂಡುಗಳನ್ನು ಪರಿಶೀಲಿಸಿ ದೃಡೀಕರಣ ಪತ್ರ ಕೊಡಲು ತನಗೆ ವಿನಂತಿಸಿದ್ದರು ಎಂದು, ಆ ಪ್ರಕಾರ ತಾನು ಸದರಿ ಗಂಧದ ತುಂಡುಗಳನ್ನು ಮತ್ತು ಚೆಕ್ಕೆಗಳನ್ನು ಪರಿಶೀಲಿಸಿ ನೋಡಲಾಗಿ, ಪರಿಮಳ ಮತ್ತು ಕಟ್ಟಿಗೆಯ ರಚನೆಯಾಧಾರದ ಮೇಲೆ ಶ್ರೀಗಂಧದ ತುಂಡುಗಳು ಅಂಶ ದೃಡಪಟ್ಟವೆಂದು ನುಡಿದು, ಆ ಬಗ್ಗೆ ಪ್ರಮಾಣ ಪತ್ರ ಕೊಟ್ಟಿದ್ದೇನೆಂದು ನುಡಿದು ಸದರಿ ಪ್ರಮಾಣ ಪತ್ರವನ್ನು ನಿಪಿ.3 ಎಂದು, ತನ್ನ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಿ ಸಾಕ್ಷ್ಯವನ್ನು ನುಡಿದಿರುತ್ತಾರೆ.

13. ಸದರಿ ಸಾಕ್ಷಿಯನ್ನು 1, 2 ಮತ್ತು 4ನೇ ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ಪಾಟೀ ಸವಾಲಿನಲ್ಲಿಃ

Visit **ecourts.gov.in** for updates or download mobile app "**eCourts Services**" from Android or iOS

"ಆ ದಿನ ಗಂಧದ ಕಳ್ಳಸಾಗಣಿಕೆಯನ್ನು ವೇಳೆ ತಪ್ಪಿಸಿ ಮಾಡಿರುತ್ತಾರೆ ಅನ್ನುವ ಮಾಹಿತಿ ಇತ್ತು. ಸದರಿ ಮಾಹಿತಿ ನಮ್ಮ ಕಚೇರಿಗೆ ನಮ್ಮ ಬಾತ್ಮಿದಾರರಿಂದ ಬಂತು. ಕಚೇರಿಯಿಂದ ಲಾರಿ ಹಿಡಿದ ಜಾಗ ಸುಮಾರು 1 ಕಿ.ಮೀ. ದೂರದಲ್ಲಿದೆ. ಆ ದಿನಕ್ಕಿಂತ ಮೊದಲೇ ನಮಗೆ ಕಳ್ಳಸಾಗಾಣಿಕೆ ಬಗ್ಗೆ ಮಾಹಿತಿ ಸಿಕ್ಕಿತ್ತು. ನಮ್ಮ ಕಚೇರಿಯಿಂದ ಲಾರಿ ಹಿಡಿದ ಬಗ್ಗೆ ಜಾಗೆಯ ಮಧ್ಯದಲ್ಲಿ ಕೆಲವೊಂದು ವಾಸದ ಮನೆಗಳಿವೆ ಅಂದರೆ ಸರಿ. ನಾವು ಹೋಗುವಾಗ ಯಾವುದೇ ಸಾರ್ವಜನಿಕ ಸಾಕ್ಷಿಯನ್ನು ಕರೆದುಕೊಂಡು ಹೋಗಲಿಲ್ಲ.

ಅದೇ ರೀತಿ ಸದರಿ ಲಾರಿಯನ್ನು ಪರಿಶೀಲಿಸುವಾಗ ಬೇರೆ ಸಾಕ್ಷಿದಾರರನ್ನು ಕರೆಸಲಿಲ್ಲ. ಅದೇ ರೀತಿ ಶ್ರೀಗಂಧ ತುಂಡುಗಳನ್ನು ವಶಪಡಿಸಿಕೊಳ್ಳುವಾಗ ಯಾವುದೇ ಸಾಕ್ಷಿದಾರರು ಸಿಗಲಿಲ್ಲ, ಕಾರಣ ಕರೆಯಲಿಲ್ಲ. 1 ರಿಂದ 3 ನೇ ಆರೋಪಿತರು ಸುಮಾರು 10 ರಿಂದ 20 ಅಡಿ ಓಡಿ ಹೋಗುವಷ್ಟರಲ್ಲಿ ನಮ್ಮ ಸಿಬ್ಬಂದಿಯವರು ಹಿಡಿದರು. ನಾನು 3 ನೇ ಆರೋಪಿ ಮೊಯಿದ್ದೀನ್‌ನನ್ನು ಹಿಡಿದಿದ್ದೇನೆ. 1, 2 ನೇ ಆರೋಪಿತರನ್ನು ಚಾಸಾ.1 ಮತ್ತು ಉಳಿದ ಸಿಬ್ಬಂದಿ ಕೂಡಿ ಹಿಡಿದರು. ಆರೋಪಿತರನ್ನು ಚಾಸಾ.1 ರವರು ವಿಚಾರಿಸಿದರು. ನಾನು ಜೊತೆಯಲ್ಲಿದ್ದೆ. 3 ನೇ ಆರೋಪಿ ಮೊಯಿದ್ದೀನ್ ನನ್ನು ಕನ್ನಡದಲ್ಲಿ ವಿಚಾರಿಸಿದರು. 1 ಮತ್ತು 2 ನೇ ಆರೋಪಿತರನ್ನು ಯಾವ ಭಾಷೆಯಲ್ಲಿ ವಿಚಾರಿಸಿದರು ಅಂತ ಹೇಳಲು ಬರುವುದಿಲ್ಲ. ಅವರ ಹೇಳಿಕೆಗಳನ್ನು ಚಾಸಾ.1 ರವರು ಸ್ಥಳದಲ್ಲಿಯೇ ಪಡೆದುಕೊಂಡರು.

Visit **ecourts.gov.in** for updates or download mobile app "**eCourts Services**" from Android or iOS

**1 ಮತ್ತು 2ನೇ ಆರೋಪಿತರು ಹಿಂದಿ ಮಿಶ್ರಿತ ಭಾಷೆಯಲ್ಲಿ ಹೇಳಿಕೆ ಕೊಡುತ್ತಿದ್ದರು. ಅದನ್ನು ದಾಖಲಿಸಿಕೊಂಡೆವು. ಆ ಹೇಳಿಕೆಯನ್ನು ಯಾರು ಭಾಷಾಂತರಿಸಿದರು ಅಂತ ನನಗೆ ಹೇಳಲು ಬರುವುದಿಲ್ಲ. ಮುದ್ದೆ ಮಾಲು-1 ಮತ್ತು 2ರ ಪ್ರತ್ಯೇಕ ತೂಕ ಹೇಳಲು ಬರುವುದಿಲ್ಲ. ತಾವು ಪ್ರತ್ಯೇಕವಾಗಿ ತೂಕ ಮಾಡಿಲ್ಲ, ಒಟ್ಟಾಗಿ ತೂಕ ಮಾಡುತ್ತೇವೆ. ಸದರಿ ಗಂಧದ ತುಂಡುಗಳನ್ನು ಕಡಿದ ಬುಡವನ್ನು ಹುಡುಕಲು ಪ್ರಯತ್ನಿಸಲಿಲ್ಲ. ಯಾಕೆಂದರೆ, ಅವು ಬೇರೆ ಬೇರೆ ಕಡೆಯಿಂದ ಕಡಿದು ಸಂಗ್ರಹಿಸಿದವುಗಳಾಗಿದ್ದವು. ನಿಪಿ.2ನ್ನು ಬರೆದ ಎಸ್ಟೇಟ್ ಮರಿಯಪ್ಪನಾಯಕ ರವರದ್ದು. ನಿಪಿ.2ರ ಸಮಯದಲ್ಲೂ ಬೇರೆ ಸಾಕ್ಷಿದಾರರನ್ನು ಕರೆದುಕೊಂಡು ಹೋಗಿರಲಿಲ್ಲ."**

14. ಈ ಮೇಲ್ಕಂಡ ಅಂಶವನ್ನು ಪರಿಶೀಲಿಸಲಾಗಿ, ಮೂಲ ಪ್ರಕರಣದಲ್ಲಿ 5ನೇ ಆರೋಪಿಯ ಬಗ್ಗೆ ಆತ ಕೃತ್ಯದಲ್ಲಿ ಬಾಗಿಯಾಗಿದ್ದರ ಬಗ್ಗೆ ನಿಖರವಾದ ಯಾವುದೇ ಮಾಹಿತಿ ಹೊರಬಂದಿರುವುದಿಲ್ಲ. ಅಲ್ಲದೇ ಸದರಿ ಸಾಕ್ಷಿಯು 1 ರಿಂದ 3ನೇ ಆರೋಪಿತರ ಬಗ್ಗೆ ಸಾಕ್ಷ್ಯವನ್ನು ನುಡಿದಿದ್ದು, ಸದರಿ 1 ಮತ್ತು 2ನೇ ಆರೋಪಿತರು ಮೂಲ ಪ್ರಕರಣ ಸಿ.ಸಿ. ಸಂಖ್ಯೆಃ319/1995ರಲ್ಲಿ ಕರ್ನಾಟಕ ಅರಣ್ಯ ಕಾಯ್ದೆ ಕಲಂ 87 ಸಹ ಕಲಂ ಭಾ.ದಂ. ಸಂ. ಕಲಂ 379ರ ಆರೋಪಗಳಿಗೆ ಶಿಕ್ಷೆಗೆ ಗುರಿಯಾಗಿದ್ದು ಹಾಗೂ 1, 2 ಮತ್ತು 4ನೇ ಆರೋಪಿತರು ಕರ್ನಾಟಕ ಅರಣ್ಯ ಕಾಯ್ದೆ ಕಲಂ 86 ಸಹ ಕಲಂ ಭಾ.ದಂ. ಸಂ. ಕಲಂ 379ರಡಿಯಲ್ಲಿನ ಆರೋಪಗಳಿಂದ ಖುಲಾಷೆಗೊಂಡಿರುತ್ತಾರೆ. ಸದರಿ ಮೇಲ್ಕಂಡ ಆರೋಪಗಳಿಂದ 3ನೇ ಆರೋಪಿಯು

ಸಿ.ಸಿ. ಸಂಖ್ಯೆ 435/1995 ರಲ್ಲಿ ಪ್ರಕರಣ ಮುಕ್ತಾಯಗೊಂಡಿರುತ್ತದೆ. 5 ನೇ ಆರೋಪಿ ಮೂಲ ಪ್ರಕರಣದಲ್ಲಿ ಪ್ರತ್ಯೇಕಿಸಲ್ಪಟ್ಟಿದ್ದು, ಸದರಿ ಆರೋಪಿಯೇ ಪ್ರಸ್ತುತ ಪ್ರಕರಣದ ಆರೋಪಿಯಾಗಿದ್ದು ಮೂಲ ಪ್ರಕರಣದಲ್ಲಿನ ವಿಚಾರಣೆ, ದಾಖಲಾತಿ, ಪಾಟೀ ಸವಾಲಿನ ಅಂಶಗಳನ್ನು ಪರಿಶೀಲಿಸಿದಾಗ ಪ್ರಸ್ತುತ ಪ್ರಕರಣದ ಆರೋಪಿತನು ಮೂಲ ಪ್ರಕರಣದಲ್ಲಿ ಬಾಗಿಯಾದ ಬಗ್ಗೆ ಯಾವುದೇ ಪೂರಕ ಅಂಶ ಹೊರಬಂದಿರುವುದಿಲ್ಲ. ಪ್ರಸ್ತುತ ಆರೋಪಿಯೇ ನಿಪಿ.1 ರಲ್ಲಿ ನಮೂದಿಸಿರುವ ಅಂಶಗಳಿಗೆ ಪೂರಕವಾಗಿ ಕೃತ್ಯದಲ್ಲಿ ಬಾಗಿಯಾಗಿರುವ ಬಗ್ಗೆ ಯಾವುದೇ ಮೌಕಿಕ ಹಾಗೂ ಲಿಖಿತ ದಾಖಲೆಗಳು ಇಲ್ಲದೇ ಇರುವುದು ಕಂಡು ಬರುತ್ತದೆ. ಸದರಿ ಅಂಶವನ್ನು ಪರಿಶೀಲಿಸಿದಾಗ ಆರೋಪಿತನ ಆರೋಪದ ಬಗ್ಗೆ ವಿಚಾರಣೆಗಳಲ್ಲಿ ರುಜುವಾತು ಆಗದೇ ಇರುವುದು ಕಂಡು ಬಂದಿರುವುದರಿಂದ ಆರೋಪಿಯ ಮೇಲಿನ ಆರೋಪಕ್ಕೆ ಸಂಬಂಧಪಟ್ಟಂತೆ ಸಂಶಯ ವ್ಯಕ್ತವಾಗುತ್ತದೆ.

15. ಪ್ರಾಸಾ.2, ಶ್ರೀ ಪ್ರಕಾಶ್, ಫಾರೆಸ್ಟರ್, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ17.10.1994 ರಂದು ಬೆಳಿಗ್ಗೆ 4 ಗಂಟೆ ಸುಮಾರಿಗೆ ತಾನು ಇತರೆ ಸಿಬ್ಬಂದಿಯೊಂದಿಗೆ ತೀರ್ಥಹಳ್ಳಿ ರಸ್ತೆಯಲ್ಲಿ ಕ್ಲಾಸಿಕ್ ಪ್ಲಾಂಟೇಷನ್ ಹತ್ತಿರ ಪ್ರಾಸಾ.1, ಚಾಸಾ.3 ಮತ್ತು 5 ರಿಂದ 7 ರವರು ಕಾಯುತ್ತಿದ್ದಾಗ ಸುಮಾರು 7-50 ರಿಂದ 8-00 ಗಂಟೆ ಸುಮಾರಿಗೆ ಕೊಪ್ಪ ಕಡೆಯಿಂದ ಒಂದು ವಾಹನ ಬಂದಿದ್ದು, ಅದನ್ನು ನಿಲ್ಲಿಸಿದೆವು ಎಂದು, ಅದು ಮಿತ್ಸುಬಿಶಿ ಕ್ಯಾಂಟರ್ ಆಗಿದ್ದು, ಅದರ ನೋಂದಣಿ ಸಂಖ್ಯೆ ಎಂ.ಹೆಚ್ಃ12-ಕ್ಯೂ-2357 ಆಗಿತ್ತು ಎಂದು, ಅದರಲ್ಲಿ ಮೂರು ಜನ ವ್ಯಕ್ತಿಗಳು ಇದ್ದರು ಎಂದು, ಆ ವಾಹನದ ಚಾಲಕನನ್ನು ಏನು ಮಾಲಿದೆ ಎಂದು ವಿಚಾರಿಸಲಾಗಿ, ಕೆಮಿಕಲ್ ಫರ್ಟಿಲೈಸರ್ ಇದೆ ಅಂತ ಹೇಳಿದ ಎಂದು, ಅದರ ಮೇಲೆ

ಟಾರ್ಪಾಲ್ ಮುಚ್ಚಿದ್ದರು ಎಂದು, ಅದನ್ನು ತೆಗೆದು ನೋಡಲಾಗಿ, ಒಳಗಡೆ ಬೂದಿ ತುಂಬಿದ ಚೀಲಗಳು ಇದ್ದವು, ಚಾಲಕ ಹೇಳಿದ ವಿಷಯಕ್ಕೂ ಅದಕ್ಕೂ ವ್ಯತ್ಯಾಸ ಬಂದಿದ್ದರಿಂದ ಅನುಮಾನ ಬಂದು ಆ ಚೀಲಗಳನ್ನು ಒಳಗೆ ಪರಿಶೀಲಿಸಲಾಗಿ ಅದರ ಒಳಗೆ ಶ್ರೀಗಂಧದ ತುಂಡುಗಳು ಇದ್ದವು ಎಂದು ನುಡಿದಿರುತ್ತಾರೆ. ಸದರಿ ಸಾಕ್ಷಿಯು ಮುಂದುವರೆದು ಆ ಸಮಯದಲ್ಲಿ ಅದರಲ್ಲಿದ್ದ ವ್ಯಕ್ತಿಗಳು ಓಡಿ ಹೋಗಲು ಪ್ರಯತ್ನಿಸಿದರು ಎಂದು, ಅವರನ್ನು ತಮ್ಮ ಸಿಬ್ಬಂದಿ ಹಿಡಿದರು, ವಾಹನದಲ್ಲಿದ್ದ ಶ್ರೀಗಂಧದ ತುಂಡುಗಳನ್ನು ಪರಿಶೀಲಿಸಲಾಗಿ, ಅವುಗಳ ಮೇಲೆ ಯಾವುದೇ ಇಲಾಖಾ ಛಾಪಾ ಇರಲಿಲ್ಲವೆಂದು, ನ್ಯಾಯಾಲಯದ ಮುಂದಿರುವ 1 ಮತ್ತು 2 ನೇ ಆರೋಪಿತರು ಆ ವಾಹನದಲ್ಲಿದ್ದವರಾಗಿದ್ದಾರೆಂದು, 1 ನೇ ಆರೋಪಿ ಆ ದಿನ ಚಾಲಕನಾಗಿದ್ದು, ಅವರ ಹೆಸರು ಯುವರಾಜ್ ಮಹಾಮುಣಿ ಆಗಿದೆ, 2 ನೇ ಆರೋಪಿಯ ಹೆಸರು ಬಾಲು ಆಗಿದೆ, ಮತ್ತೊಬ್ಬ ವ್ಯಕ್ತಿಯ ಹೆಸರು ಮೊಹಿದ್ದೀನ್ ಆಗಿದೆ ಎಂದು, ಅವರನ್ನು ವಿಚಾರಿಸಲಾಗಿ ಅವರ ಹತ್ತಿರ ಅವುಗಳನ್ನು ಹೊಂದಿದ ಅಥವಾ ಸಾಗಿಸುವ ಬಗ್ಗೆ ಯಾವುದೇ ರಹದಾರಿ ಇರಲಿಲ್ಲವೆಂದು, ಆ ವಾಹನದಲ್ಲಿ ಒಟ್ಟು 196 ಗಂಧದ ತುಂಡುಗಳಿದ್ದವು ಮತ್ತು ಮೂಟೆಗಳಲ್ಲಿ ಚೆಕ್ಕೆಗಳಿದ್ದವು ಎಂದು, ಸದರಿ ಗಂಧದ ತುಂಡುಗಳನ್ನು ಅಳತೆ ಮಾಡಿ, ಕ್ರಮ ಸಂಖ್ಯೆ ನೀಡಿ, ಅವುಗಳ ಮೇಲೆ ಎಫಓಸಿ ನಂಃ50-94-95 ಮತ್ತು ಇಲಾಖಾ ಛಾಪಾ ಕೆಎನ್ಎಫ್‌ಡಿ-ಎಫಓ 3 ಡಿಡಿ ಹಾಕಿದೆವೆಂದು, ನಂತರ ಸದರಿ ಗಂಧದ ತುಂಡುಗಳನ್ನು, ಚೆಕ್ಕೆಗಳನ್ನು ತೂಕ ಮಾಡಲಾಗಿ ಒಟ್ಟು 1096 ಕೆ.ಜಿ.ಗಳು ಇದ್ದವುವೆಂದು, ನಂತರ 1 ರಿಂದ 3 ನೇ ಆರೋಪಿತರನ್ನು ಗಂಧದ ಕಟ್ಟಿಗೆಯನ್ನು ಎಲ್ಲಿಂದ ತಂದಿದ್ದೀರಿ ಎಂದು ವಿಚಾರಿಸಲಾಗಿ, ಸೀಗೋಡು ಹತ್ತಿರದಿಂದ 4 ನೇ ಆರೋಪಿ ತುಂಬಿ ಕಳಿಸಿದ್ದು ಎಂದು

ಹೇಳಿದರೆಂದು, ಮತ್ತು ಆತನನ್ನು ಕರೆದುಕೊಂಡು ಹೋದರೆ ತೋರಿಸುತ್ತೇನೆಂದು ಹೇಳಿದರೆಂದು, ನಂತರ ಸದರಿ ಗಂಧದ ತುಂಡುಗಳನ್ನು ವಶಪಡಿಸಿಕೊಂಡು ಒಂದು ಮಹಜರ್ ಬರೆಯಲಾಯಿತು ಎಂದು ನುಡಿದಿರುತ್ತಾರೆ. ಸದರಿ ಸಾಕ್ಷಿಯು ಮುಂದುವರೆದು ಅದಕ್ಕೆ ತಾನು ಸಹಿ ಮಾಡಿದ್ದೇನೆ ಎಂದು ನುಡಿದು ನಿಪಿ.1 ರಲ್ಲಿರುವ ತನ್ನ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಿಕೊಂಡಿರುತ್ತಾರೆ. ನಂತರ ಆರೋಪಿತರೊಂದಿಗೆ ವಾಹನ ಮತ್ತು ಶ್ರೀಗಂಧದ ತುಂಡುಗಳನ್ನು ತಮ್ಮ ಕಚೇರಿಗೆ ತೆಗೆದುಕೊಂಡು ಬಂದೆವೆಂದು, ಆ ದಿನ ವಶಪಡಿಸಿಕೊಂಡ ಗಂಧದ ತುಂಡುಗಳನ್ನು ಗುರುತಿಸುತ್ತೇನೆ ಎಂದು ಮುದ್ದೆ ಮಾಲು-1 ಮತ್ತು 2 ರಲ್ಲಿರುವ ಗಂಧದ ತುಂಡುಗಳು ಕ್ರಮಸಂಖ್ಯೆ 1 ಮತ್ತು 196 ಗಳನ್ನು ಹೊಂದಿದ್ದವುಗಳಾಗಿವೆಂದು ನುಡಿದಿರುತ್ತಾರೆ.

16. ಸದರಿ ಸಾಕ್ಷಿಯು ಮುಂದುವರೆದು, ನಂತರ 3 ನೇ ಆರೋಪಿ ಆತನನ್ನು ಸೀಗೋಡಿಗೆ ಕರೆದುಕೊಂಡು ಹೋದರೆ, ಗಂಧ ಕಳಿಸಿಕೊಟ್ಟ ವ್ಯಕ್ತಿಯನ್ನು ತೋರಿಸಬಲ್ಲೆ ಅಂತ ಹೇಳಿದ್ದರ ಮೇರೆಗೆ ತಮ್ಮ ಇಲಾಖಾ ಜೀಪಿನಲ್ಲಿ ಅವನನ್ನು ಸೀಗೋಡಿಗೆ ಕರೆದುಕೊಂಡು ಹೋದೆವುವೆಂದು, ಸೀಗೋಡಿನಲ್ಲಿ ಒಂದು ಮನೆಗೆ ಕರೆದುಕೊಂಡು ಹೋಗಿ ಇದೇ ಪ್ರಕಾಶ್ ಇರುವ ಮನೆ ಅಂತ ಹೇಳಿದ ಎಂದು, ನಂತರ ಒಳಗಡೆಯಿಂದ ಪ್ರಕಾಶ್‌ನನ್ನು (4 ನೇ ಆರೋಪಿಯನ್ನು) ಕರೆದಿದ್ದು, ಆತನು ಹೊರಗೆ ಬಂದು ತನಗೂ ಪ್ರಕರಣಕ್ಕೂ ಸಂಬಂಧವಿಲ್ಲ ಅಂತ ಹೇಳಿ ಓಡಿ ಹೋಗಲು ಪ್ರಯತ್ನಿಸಿದ, ತಾವು ಮತ್ತು ತಮ್ಮ ಸಿಬ್ಬಂದಿಗಳು ಹೋಗಿ ಹಿಡಿದೆವುವೆಂದು, ಮತ್ತೆ ವಿಚಾರಿಸಿದಾಗ 4 ನೇ ಆರೋಪಿ ತಾನು ಮತ್ತು ತನ್ನ ಬಾವ ಮಂಜುನಾಥ (5 ನೇ ಆರೋಪಿ) ಸೇರಿ ವಾಹನದಲ್ಲಿ ಗಂಧದ ತುಂಡುಗಳನ್ನು ತುಂಬಿಕೊಟ್ಟಿದ್ದೇವೆ ಅಂತ ಒಪ್ಪಿಕೊಂಡನೆಂದು, ಎಲ್ಲಿ ತುಂಬಿದೆ ಅಂತ ವಿಚಾರಿಸಲಾಗಿ ಆ ಮನೆಯಿಂದ 100

Visit **ecourts.gov.in** for updates or download mobile app "**eCourts Services**" from Android or iOS

ಮೀಟರ್ ಅಂತರದಲ್ಲಿ ಕಾಫಿ ತೋಟದಲ್ಲಿ ಒಂದು ಜಾಗಕ್ಕೆ ಕರೆದುಕೊಂಡು ಹೋದನೆಂತಲೂ, ಆ ಸ್ಥಳವನ್ನು ಪರಿಶೀಲಿಸಲಾಗಿ ಸ್ಥಳದಲ್ಲಿ ಸಣ್ಣ ಸಣ್ಣ ಗಂಧದ ಚಕ್ಕೆಗಳು ಬಿದ್ದಿದ್ದವು, ಮತ್ತು ಅದೇ ಸ್ಥಳದಲ್ಲಿ ಒಂದು ಚಾರ್ ಮಿನಾರ್ ಸಿಗರೇಟ್ ಪ್ಯಾಕ್‌ನ ಹಾಳೆಯಲ್ಲಿ ತಾವು ಮೊದಲು ಅಮಾನತುಪಡಿಸಿಕೊಂಡ ವಾಹನದ ನೋಂದಣಿ ಸಂಖ್ಯೆ ಬರೆದಿತ್ತು ಎಂದು ನುಡಿದಿರುತ್ತಾರೆ. ಮುಂದುವರೆದು ಅಲ್ಲಿ ಒಂದು ಮಹಜರ್ ಕ್ರಮ ಜರುಗಿಸಿ, ಸದರಿ ಸಿಗರೇಟ್ ಪ್ಯಾಕಿನ ಹಾಳೆ ಮತ್ತು ಶ್ರೀಗಂಧದ ಚೆಕ್ಕೆಗಳನ್ನು ಅಮಾನತುಪಡಿಸಿಕೊಂಡೆವು ಎಂದು, ಆ ಮಹಜರಿಗೆ ಸಹಿ ಮಾಡಿದ್ದೇವೆಂದು ನುಡಿದು ನಿಪಿ.2 ರಲ್ಲಿರುವ ತನ್ನ ಸಹಿಯನ್ನು ನಿಪಿ.2(ಬಿ) ಎಂದು ಗುರುಡಿಸಿಕೊಂಡು ನಿಪಿ.2 ನ್ನು 11 ಗಂಟೆಯಿಂದ 11.30 ರವರೆಗೆ ಬರೆದಿದ್ದೇವೆಂದು, ನಂತರ 4 ನೇ ಆರೋಪಿಯನ್ನು ಚಾಸಾ.1 ರವರು ದಸ್ತಗಿರಿ ಮಾಡಿ ಕಚೇರಿಗೆ ಕರೆದುಕೊಂಡು ಬಂದೆವೆಂದು, ಆ ದಿನ ಅಮಾನತುಪಡಿಸಿಕೊಂಡ ಚಾರ್ ಮಿನಾರ್ ಸಿಗರೇಟ್ ಪ್ಯಾಕಿನ ಹಾಳೆ ಗುರುತಿಸಬಲ್ಲೆ ಹಾಗೂ ಅದರಲ್ಲಿ ಎಂ.ಹೆಚ್ಃ12/ಕ್ಯೂ 2357 ಅಂತ ಬರೆದಿದೆ ಎಂದು ನುಡಿದು ಅದನ್ನು ನಿಪಿ.4 ಎಂದು ಗುರುತಿಸಿ ಸಾಕ್ಷ್ಯವನ್ನು ನುಡಿದಿರುತ್ತಾರೆ.

17. ಸದರಿ ಸಾಕ್ಷಿಯನ್ನು ಶ್ರೀ ಐ.ಸಿ.ಸಿ. ರವರು ಪಾಟೀ ಸವಾಲು ಮಾಡಿದ್ದು, ಪಾಟೀ ಸವಾಲಿನಲ್ಲಿಃ

> **"ಸ್ಥಳದಲ್ಲಿ 1 ರಿಂದ 3 ನೇ ಆರೋಪಿತರನ್ನು ಚಾಸಾ.1 ರವರು ವಿಚಾರಿಸಿದರು. 3 ನೇ ಆರೋಪಿಯನ್ನು ಕನ್ನಡದಲ್ಲಿ ವಿಚಾರಿಸಿದೆವು, 1, 2 ನೇ ಆರೋಪಿತರಿಗೆ ಕನ್ನಡ ಭಾಷೆ ಬರುವುದಿಲ್ಲ,**

**ಅವರು ಕನ್ನಡವನ್ನು ಅರ್ಥಮಾಡಿಕೊಳ್ಳ ಬಲ್ಲರು, ಮಾತನಾಡುವುದಿಲ್ಲ. ಅವರಿಗೆ ಪರಿಪೂರ್ಣ ಕನ್ನಡ ಬರುತ್ತಿರಲಿಲ್ಲ. 1 ಮತ್ತು 2ನೇ ಆರೋಪಿತರ ಹೇಳಿಕೆಯನ್ನು ಪಡೆದಿದ್ದೆವು. ಅವರನ್ನು ಹಿಂದಿ ಭಾಷೆಯಲ್ಲಿ ವಿಚಾರಿಸಿ, ಕನ್ನಡ ಭಾಷೆಯಲ್ಲಿ ಹೇಳಿಕೆ ಬರೆದಿದ್ದೇವೆ. ಚಾಸಾ.1 ರವರೇ ಹಿಂದಿ ಭಾಷೆಯಲ್ಲಿ ಅವರನ್ನು ವಿಚಾರಿಸಿದರು. ಚಾಸಾ.1 ರವರೇ 1, 2ನೇ ಆರೋಪಿತರು ಹೇಳಿದ ಹಿಂದಿ ಹೇಳಿಕೆಯನ್ನು ಕನ್ನಡದಲ್ಲಿ ತರ್ಜುಮೆ ಮಾಡಿ ಹೇಳಿದ್ದಾರೆ. ನನಗೂ ಹಿಂದಿ ಭಾಷೆ ಬರುತ್ತದೆ, ಆದರೆ ಪರಿಪೂರ್ಣವಾಗಿ ಬರುವುದಿಲ್ಲ. ನನಗೆ ಹಿಂದಿ ಕೆಲವೊಂದು ಶಬ್ದಗಳು ಅರ್ಥವಾಗುವುದಿಲ್ಲ. 1 ಮತ್ತು 2ನೇ ಆರೋಪಿತರನ್ನು ನಂತರ ಕಚೇರಿಯಲ್ಲಿ ಬಿಟ್ಟು 3ನೇ ಆರೋಪಿ ಮೊಯಿದ್ದೀನ್ ನ್ನು ಮಾತ್ರ ಸೀಗೋಡಿಗೆ ಕರೆದುಕೊಂಡು ಹೋದೆವು. 3ನೇ ಆರೋಪಿ ನಮ್ಮಂನ್ನು 4ನೇ ಆರೋಪಿ ಮನೆಗೆ ಕರೆದುಕೊಂಡು ಹೋದ. ಅಲ್ಲಿಂದ 4ನೇ ಆರೋಪಿ ನಮ್ಮನ್ನು ಗಂಧದ ಕಟ್ಟಿಗೆ ತುಂಬಿದ ಜಾಗಕ್ಕೆ ಕರೆದುಕೊಂಡು ಹೋದ.”**

18. ಈ ಮೇಲ್ಕಂಡ ಅಂಶವನ್ನು ಪರಿಶೀಲಿಸಲಾಗಿ ಮೂಲ ಪ್ರಕರಣದಲ್ಲಿ 5ನೇ ಆರೋಪಿಯ ಬಗ್ಗೆ ಹಾಗೂ ಆತ ಕೃತ್ಯದಲ್ಲಿ ಬಾಗಿಯಾಗಿದ್ದ ಎಂಬುದರ ಬಗ್ಗೆ ಸದರಿ ಸಾಕ್ಷಿಯಿಂದ ಯಾವುದೇ ಪೂರಕವಾದ ಅಂಶ ಹೊರಬಂದಿರುವುದಿಲ್ಲ. ಆದುದರಿಂದ ಆರೋಪಿಯ ಮೇಲಿನ ಆರೋಪಕ್ಕೆ ಸಂಬಂಧಪಟ್ಟಂತೆ ಸಂಶಯ ವ್ಯಕ್ತವಾಗುತ್ತದೆ.

19. ಪ್ರಾಸಾ.3, ಶ್ರೀ ಭೋಜರಾಜ, ಅರಣ್ಯ ರಕ್ಷಕ, ಇವರು ಈ ಪ್ರಕರಣದಲ್ಲಿ ಪ್ರಾಸಾ.1, 2, ಚಾಸಾ.1, 3, 6 ಮತ್ತು 7 ರವರೊಂದಿಗೆ ದಾಳಿಗೆ ಸಹಕರಿಸಿದಂತಹ ಸ್ವಾಕ್ಷಿದಾರರಾಗಿದ್ದು, ಪ್ರಾಸಾ.2 ರವರು ನುಡಿದ ಸಾಕ್ಷ್ಯವನ್ನು ಸಮರ್ಥಿಸಿ ಸಾಕ್ಷ್ಯ ನುಡಿದಿರುತ್ತಾರೆ. ಮುಂದುವರೆದು ತಮ್ಮ ಮುಖ್ಯ ವಿಚಾರಣೆಯಲ್ಲಿ ನಿಪಿ.1ರ ಮಹಜರಿಗೆ ತಾನು ಸಹಿ ಮಾಡಿರುವುದಾಗಿ ನುಡಿದು ನಿಪಿ.1ರಲ್ಲಿರುವ ತನ್ನ ಸಹಿಯನ್ನು ನಿಪಿ.1(ಸಿ) ಎಂದು ಹಾಗೂ ಮುದ್ದೆ ಮಾಲು-1 ಮತ್ತು 2ಗಳನ್ನು ಗುರುತಿಸಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಸದರಿ ಸಾಕ್ಷಿಯು ಮುಂದುವರೆದು, ನಂತರ 3ನೇ ಆರೋಪಿ ತಮಗೆ ಹೇಳಿದಂತೆ ತಮ್ಮನ್ನು ದೇವಗೋಡು ಗ್ರಾಮಕ್ಕೆ ಕರೆದುಕೊಂಡು ಹೋದನೆಂತಲೂ, ಆಗ ಬೆಳಿಗ್ಗೆ 11-00 ಗಂಟೆಯಾಗಿತ್ತು, ಅಲ್ಲಿ 4ನೇ ಆರೋಪಿ ವಾಸ ಮಾಡುತ್ತಿದ್ದರೆಂದು, ಅವರ ಮಾವ ಮರಿಯಪ್ಪನಾಯಕರ ಮನೆಯ ಹತ್ತಿರ ಕರೆದುಕೊಂಡು ಹೋದರೆಂದು, ತಾವು ಮನೆಯ ಹತ್ತಿರ ಹೋಗಿ ಪ್ರಕಾಶ್ ಅಂತ ಕೂಗಲಾಗಿ ನ್ಯಾಯಾಲಯದ ಮುಂದೆ ಇರುವ 4ನೇ ಆರೋಪಿ ಹೊರಗಡೆ ಬಂದಿದ್ದು, ಆತನನ್ನು ವಿಚಾರಿಸಲಾಗಿ ತನಗೂ ಅದಕ್ಕೂ ಯಾವುದೇ ಸಂಬಂಧವಿಲ್ಲ ಅಂತ ಹೇಳಿ ಓಡಿ ಹೋಗಲು ಪ್ರಯತ್ನಿಸಿದ್ದು, ತಾವು ತಕ್ಷಣ ಬೆನ್ನಟ್ಟಿ ಹಿಡಿದೆವೆಂದು, ಜೀಪಿನಲ್ಲಿ ಅವನನ್ನು ಕೂಡಿಸುವಾಗ ಕೊಸರಾಡಿ ಮತ್ತು ಹಿಡಿಯುವಾಗ ಪೊದೆಯ ಮೇಲೆ ಬಿದ್ದು ಮೈಮೇಲೆ ಚಿಕ್ಕಪುಟ್ಟ ಗಾಯಗಳು ಆಗಿದ್ದವೆಂದು, 4ನೇ ಆರೋಪಿಯನ್ನು ವಿಚಾರಿಸಲಾಗಿ, ಕೊನೆಗೆ ತಾನು ಗಂಧ ತುಂಬಿದ್ದು ನಿಜ ಅಂತ ಒಪ್ಪಿಕೊಂಡು ಮನೆಯಿಂದ ಸುಮಾರು 100 ಅಡಿ ದೂರದಲ್ಲಿ ಒಂದು ಜಾಗಕ್ಕೆ ಕರೆದುಕೊಂಡು ಹೋಗಿ ಇದೇ ಗಂಧ ತುಂಬಿದ ಜಾಗ ಅಂತ ತೋರಿಸಿದನೆಂತಲೂ, ಅಲ್ಲಿ ಕೆಳವೊಂದು ಗಂಧದ ಚಕ್ಕೆಗಳು ಬಿದ್ದಿದ್ದವು, ಮತ್ತು ಒಂದು ಚಾರ್ ಮಿನಾರ್

Visit ecourts.gov.in for updates or download mobile app "eCourts Services" from Android or iOS

ಸಿಗರೇಟ್ ಪ್ಯಾಕ್‌ನ ಕಾಗದ ಬಿದ್ದಿತ್ತು, ಒಂದು ಮುಖ ಅದರ ಚಾರ್ ಮಿನಾರ್ ಅಂತ ಬರೆದಿತ್ತು, ಇನ್ನೊಂದು ಮುಖದಲ್ಲಿ ಎಂ.ಹೆಚ್ಃ12/ಕ್ಯೂ2357 ಅಂತ ಬರೆದಿತ್ತು, ಕಾರಣ ಆರೋಪಿಯು ಗಂಧದ ಕಳ್ಳಸಾಗಾಣಿಕೆಯಲ್ಲಿ ಪಾಲುಗೊಂಡಿದ್ದರಿಂದ ಆ ಸ್ಥಳದಲ್ಲಿ ಒಂದು ಮಹಜರ್ ಕ್ರಮ ಜರುಗಿಸಿದೆವೆಂದು, ಆ ಮಹಜರಿಗೆ ತಾನು ಸಹಿ ಮಾಡಿದ್ದೇನೆಂದು ನುಡಿದು ನಿಪಿ.2 ರಲ್ಲಿರುವ ತನ್ನ ಸಹಿಯನ್ನು ನಿಪಿ.2(ಸಿ) ಎಂದು ಗುರುತಿಸಿಕೊಂಡಿರುತ್ತಾರೆ. ಸಿಗರೇಟು ಪ್ಯಾಕ್‌ನ ಕಾಗದವನ್ನು ಗುರುತಿಸಬಲ್ಲೆ ಎಂದು ನುಡಿದು ನಿಪಿ.3 ರಲ್ಲಿರುವುದು ಅದೇ ಆಗಿದೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

20. ಸದರಿ ಸಾಕ್ಷಿಯನ್ನು ಶ್ರೀ ಐ.ಸಿ.ಸಿ. ರವರು ಪಾಟೀ ಸವಾಲು ಮಾಡಿದ್ದು, ಪಾಟೀ ಸವಾಲಿನಲ್ಲಿಃ

> **"ವಾಹನ ಹಿಡಿದ ಸಮಯದಲ್ಲಿ 1 ರಿಂದ 3 ನೇ ಆರೋಪಿತರ ಹೇಳಿಕೆ ಪಡೆದಿದ್ದು, ಆ ನಂತರ ಬೇರೆ ಯಾವುದೇ ಆರೋಪಿತರ ಹೇಳಿಕೆ ಪಡೆದಿಲ್ಲ, ಆರೋಪಿತರನ್ನು ಪ್ರಾಸಾ.1 ರವರು ವಿಚಾರಿಸಿದರು. ಅವರು 3 ನೇ ಆರೋಪಿಯನ್ನು ಕನ್ನಡದಲ್ಲಿ ಮತ್ತು 1 ಮತ್ತು 2 ನೇ ಆರೋಪಿತರನ್ನು ಹಿಂದಿ ಭಾಷೆಯಲ್ಲಿ ವಿಚಾರಿಸಿದರು. ನಾನು ಹಿಂದಿ ಭಾಷೆ ಮಾತನಾಡಬಲ್ಲೆ. ಚಾಸಾ.1 ರವರಿಗೆ ಹಿಂದಿ ಭಾಷೆ ಬರೆಯಲು ಬರುತ್ತದೆಯೇ ಅಂತ ನನಗೆ ಗೊತ್ತಿಲ್ಲ. ಚಾಸಾ.1 ರವರು ಹಿಂದಿಯ ಭಾಷೆಯಲ್ಲಿ ಆರೋಪಿತರು ಹೇಳಿದ ಹೇಳಿಕೆಯನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಬೇರೆಯವರಿಗೆ ಹೇಳಿ ಬರೆಸಿದರು.**
>
> **ನಿಪಿ.2 ರ ಸ್ಥಳದಲ್ಲಿ ಕಂಡು ಬಂದ ಗಂಧದ ಸಣ್ಣಪುಟ್ಟ ಚೆಕ್ಕೆಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. "**

Visit ecourts.gov.in for updates or download mobile app "eCourts Services" from Android or iOS

21. ಈ ಮೇಲ್ಕಂಡ ಅಂಶವನ್ನು ಪರಿಶೀಲಿಸಲಾಗಿ ಮೂಲ ಪ್ರಕರಣದಲ್ಲಿ 5 ನೇ ಆರೋಪಿಯ ಬಗ್ಗೆ ಹಾಗೂ ಆತ ಕೃತ್ಯದಲ್ಲಿ ಬಾಗಿಯಾಗಿದ್ದ ಎಂಬುದರ ಬಗ್ಗೆ ಸದರಿ ಸಾಕ್ಷಿಯಿಂದ ಯಾವುದೇ ಪೂರಕವಾದ ಅಂಶ ಹೊರಬಂದಿರುವುದಿಲ್ಲ. ಆದುದರಿಂದ ಆರೋಪಿತರ ಮೇಲಿನ ಆರೋಪಕ್ಕೆ ಸಂಬಂಧಪಟ್ಟಂತೆ ಸಂಶಯ ವ್ಯಕ್ತವಾಗುತ್ತದೆ.

22. ಪ್ರಾಸಾ.4, ಶ್ರೀ ಸುರೇಶ್ ಶೆಟ್ಟಿ, ವಲಯಾರಣ್ಯಧಿಕಾರಿ, ಇವರು ಈ ಪ್ರಕರಣದಲ್ಲಿ ಸಿಬ್ಬಂದಿಯವರೊಂದಿಗೆ ದಾಳಿಯನ್ನು ನಡೆಸಿ, ಆರೋಪಿತರ ವಿರುದ್ಧ ದೋಷಾರೋಪಣಾ ಪತ್ರವನ್ನು ಸಲ್ಲಿಸಿದ ಬಗ್ಗೆ ನುಡಿದ ಸ್ವಾಕ್ಷಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 17.10.1994 ರಂದು ಎಂದಿನಂತೆ ರಾತ್ರಿ ಗಸ್ತು ತಿರುಗಿ ತೀರ್ಥಹಳ್ಳಿ- ಕೊಪ್ಪ ರಸ್ತೆಯಲ್ಲಿರುವ ಕ್ಲಾಸಿಕ್ ಪ್ಲಾಂಟೇಷನ್ ಹತ್ತಿರ ಬೆಳಿಗ್ಗೆ 4 ಗಂಟೆಗೆ ಕಾಯುತ್ತಿದ್ದಾಗ ಬೆಳಿಗ್ಗೆ 7-30 ರ ಸಮಯದಲ್ಲಿ ಕೊಪ್ಪ ಕಡೆಯಿಂದ ಒಂದು ಹಸಿರು ವ್ಯಾನು ಬಂದಿತ್ತು ಎಂದು, ಆಗ ತನ್ನ ಜೊತೆಗೆ ಪ್ರಾಸಾ.1 ರಿಂದ 3, ಚಾಸಾ.3 ಮತ್ತು 6 ರಿಂದ 8 ರವರು ಇದ್ದರು ಎಂದು, ಸದರಿ ವ್ಯಾನನ್ನು ನಿಲ್ಲಿಸಲು ಸೂಚನೆ ಕೊಟ್ಟೆವೆಂದು, ಅದು ನಿಂತಿತ್ತು ಎಂದು, ಅದರಲ್ಲಿ ಚಾಲಕ ಸೇರಿ ಮೂರು ಜನರಿದ್ದರು, ಸದರಿ ಚಾಲಕನನ್ನು ವಾಹನದಲ್ಲಿ ಏನು ಇದೆ ಅಂತ ಕೇಳಲಾಗಿ ಕೆಮಿಕಲ್ ಫರ್ಟಿಲೈಸರ್ ಇದೆ ಅಂತ ಹೇಳಿದರೆಂದು, ತಾವು ಅದರ ಮೇಲಿದ್ದ ಟಾರ್ಪಾಲನ್ನು ಬಿಚ್ಚಿ ಪರಿಶೀಲಿಸಲಾಗಿ ಅದರಲ್ಲಿ ಭತ್ತದ ಕೊಳಲಿಯ ಬೂದಿ ತುಂಬಿದ ಚೀಲಗಳಿದ್ದವು ಎಂದು, ಅನುಮಾನ ಬಂದು ಆ ಮೂಟೆಗಳನ್ನು ಎತ್ತಿ ನೋಡಲಾಗಿ ಕೆಳಗಡೆ ಮರದ ತುಂಡುಗಳು ಇದ್ದವು ಎಂದು, ವಾಸನೆ ಸಹಾಯದಿಂದ

Visit ecourts.gov.in for updates or download mobile app "eCourts Services" from Android or iOS

ಅವು ಗಂಧದ ತುಂಡುಗಳು ಅಂತ ಕಂಡುಬಂದವು ಎಂದು, ಅಷ್ಟೋತ್ತಿಗೆ ಅದರಲ್ಲಿದ್ದ ಮೂರು ಜನರು ಓಡಿ ಹೋಗಲು ಪ್ರಯತ್ನಿಸಿದರು, ತಾವೆಲ್ಲಾ ಸೇರಿ ಹಿಡಿದೆವು, ಆ ವ್ಯಕ್ತಿಗಳ ಹೆಸರು ವಿಳಾಸ ವಿಚಾರಿಸಲಾಗಿ ಅದರ ಚಾಲಕ ತನ್ನ ಹೆಸರು ಯುವರಾಜ ಮಹಾಮುನಿ, ಮತ್ತೊಬ್ಬ (ಕ್ಲೀನರ್) ಬಾಲು, ಮತ್ತೊಬ್ಬ ಮೊಹಿದ್ದೀನ್ ಅಂತ ಹೆಸರು ತಿಳಿಸಿದರು ಎಂದು, ಮತ್ತು ವಿಳಾಸವನ್ನು ತಿಳಿಸಿದರು ಎಂದು, ನ್ಯಾಯಾಲಯದ ಮುಂದಿರುವ 1 ಮತ್ತು 2 ನೇ ಆರೋಪಿತರು ಆ ದಿನ ಸದರಿ ವಾಹನದ ಚಾಲಕ ಮತ್ತು ಕ್ಲೀನರಾಗಿದ್ದರು, ಸದರಿ ವಾಹನ ಐಸರ್ ಮಿತ್‌ಸುಬಿಶಿ ಕ್ಯಾಂಟರ್ ಆಗಿದ್ದು, ಅದರ ನೋಂದಣಿ ಸಂಖ್ಯೆ ಎಂ.ಹೆಚ್ಃ12/ಕ್ಯೂ-2350 ಆಗಿತ್ತು ಎಂದು, ಸದರಿ ಗಂಧದ ತುಂಡುಗಳ ಮೇಲೆ 16 ಮೂಟೆ ಬೂದಿ ಚೀಲಗಳಿದ್ದವು, ಅದರಲ್ಲಿ ಒಟ್ಟು 196 ಗಂಧದ ತುಂಡುಗಳಿದ್ದವು ಮತ್ತು 2 ಗೋಣಿಚೀಲದಲ್ಲಿ ಗಂಧದ ಚೆಕ್ಕೆಗಳಿದ್ದವು, ಅವುಗಳನ್ನು ಹೊಂದಿದ ಬಗ್ಗೆ ಆರೋಪಿತರ ಹತ್ತಿರ ಯಾವುದೇ ರಹದಾರಿ ಇರಲಿಲ್ಲವೆಂದು, ಕಾರಣ ಅವುಗಳಿಗೆ ಕ್ರಮ ಸಂಖ್ಯೆ ಕೊಟ್ಟು, ಅಳತೆ ಮಾಡಿ ಎಫ್ ಒಸಿಃ ನಂ.ಃ50ಃ94-95 ನ್ನು ಕೆಂಪು ಬಣ್ಣದಲ್ಲಿ ನಮೂದಿಸಿದೆವೆಂದು, ಮತ್ತು ಅವುಗಳ ಮೇಲೆ ಇಲಾಖೆಯ ಛಾಪಾ ಕೆ ಎನ್ ಎಫ್ ಡಿ ಎಫಓ 3 ಡಿಡಿ ಹಾಕಿದೆವೆಂದು, ಎಫ್.ಒ.ಸಿ. ಸಂಖ್ಯೆಯನ್ನು ಪಕ್ಕದಲ್ಲಿಯೇ ಇದ್ದ ತಮ್ಮ ಕಚೇರಿಯಿಂದ ತರಿಸಿದೆವೆಂದು, ನಂತರ ಗಂಧದ ಕಟ್ಟಿಗೆಗಳನ್ನು ತೂಕ ಮಾಡಲಾಗಿ ಒಟ್ಟು 1095 ಕೆ.ಜಿ. ತೂಕವಿತ್ತು, ಈ ಬಗ್ಗೆ ಮಹಜರ್ ಕ್ರಮವರನ್ನು ಬೆಳಿಗ್ಗೆ 8 ರಿಂದ 10 ಗಂಟೆವರೆಗೆ ಜರುಗಿಸಿದ್ದೇವೆಂದು, ಆ ಮಹಜರಿಗೆ ಸಹಿ ಮಾಡಿದ್ದೇನೆಂದು ನುಡಿದು ನಿಪಿ.1 ರಲ್ಲಿರುವ ತನ್ನ ಸಹಿಯನ್ನು ನಿಪಿ.1(ಡಿ) ಎಂದು ಗುರುತಿಸಿರುತ್ತಾರೆ.

Visit **ecourts.gov.in** for updates or download mobile app "**eCourts Services**" from Android or iOS

23. ಸದರಿ ಸಾಕ್ಷಿಯು ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ಅದೇ ವೇಳೆಗೆ 1, 2 ಮತ್ತು 3ನೇ ಆರೋಪಿ ಮೊಹಿದ್ದೀನ್ ಇವರುಗಳನ್ನು ವಿಚಾರಿಸಲಾಗಿ ಸದರಿ ಮೊಹಿದ್ದೀನ್ ಸದರಿ ಗಂಧವನ್ನು ಸೀಗೋಡು ವಾಸಿ ಪ್ರಕಾಶ್ (ಆರೋಪಿ-4) ಅನ್ನುವವರು ತುಂಬಿಸಿಕೊಟ್ಟರು ಅಂತ ಹೇಳಿದರೆಂದು, ಮತ್ತು ತಮ್ಮನ್ನು ಕರೆದುಕೊಂಡು ಹೋದರೆ ಅವರನ್ನು ತೋರಿಸುತ್ತೇವೆ ಅಂತ ಹೇಳಿದರೆಂದು, ಸದರಿ ಗಂಧವನ್ನು 4ನೇ ಆರೋಪಿಯ ಮನೆಯ ಹತ್ತಿರದಿಂದ ತುಂಬಿಸಿಕೊಂಡು ಬಂದಿದ್ದೇವೆಂದು, ಆ ಬಗ್ಗೆ ಆರೋಪಿತರ ಹೇಳಿಕೆ ದಾಖಲು ಮಾಡಿಕೊಂಡಿದ್ದೇನೆಂದು, 1 ಮತ್ತು 2ನೇ ಆರೋಪಿತರು ತಮ್ಮನ್ನು ವಾಹನ ಸಮೇತ 3ನೇ ಆರೋಪಿ ಮೊಹಿದ್ದೀನ್ ಮಂಗಳೂರಿನಿಂದ ಬೂದಿ ಮೂಟೆ ತುಂಬಿಕೊಂಡು 4ನೇ ಆರೋಪಿ ಮನೆಗೆ ಕರೆದುಕೊಂಡು ಬಂದೆವು ಅಂತ ಹೇಳಿದರೆಂದು, ಮತ್ತು ಸಾಗರದಲ್ಲಿ 4ನೇ ಆರೋಪಿಯ ಮನೆಯಲ್ಲಿ ಗಂಧವನ್ನು ತುಂಬಿಕೊಂಡು ಬಂದೆವು ಅಂತ ಹೇಳಿದರು ಎಂದು ಮತ್ತು ಸಾಗರದಲ್ಲಿ 4ನೇ ಆರೋಪಿ ತಮಗೆ ಭೇಟಿಯಾಗುತ್ತಾನೆ ಅಂತ ಹೇಳಿದ್ದ ಎಂದು, ಆ ಪ್ರಕಾರ ತಾವು ಹೋಗುತ್ತಿದ್ದೇವೆ ಅಂತ ಹೇಳಿದ ಎಂದು, 1 ಮತ್ತು 2ನೇ ಆರೋಪಿತರು ಹಿಂದಿಯಲ್ಲಿ ಹೇಳಿದ ಹೇಳಿಕೆಯನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಬರೆಸಿದ್ದೇನೆ ಎಂದು, ಸದರಿ ಹೇಳಿಕೆಗಳು 1 ಮತ್ತು 2ನೇ ಆರೋಪಿಯವುಗಳಾಗಿವೆ ಎಂದು ನುಡಿದು ಅವುಗಳನ್ನು ನಿಪಿ.5 ಮತ್ತು ನಿಪಿ.6 ಎಂದು ಗುರುತಿಸಿಕೊಂಡಿರುತ್ತಾರೆ. ಸದರಿ ಸಾಕ್ಷಿಯು ಮುಂದುವರೆದು 3ನೇ ಆರೋಪಿ ಮೊಹಿದ್ದೀನ್ ಕನ್ನಡದಲ್ಲಿ ಹೇಳಿದ ಹೇಳಿಕೆಯನ್ನು ತಾನು ದಾಖಲು ಮಾಡಿದ್ದೇನೆಂದು ನುಡಿದು, ಅದನ್ನು ನಿಪಿ.7 ಎಂದು ಗುರುತಿಸಿಕೊಂಡಿರುತ್ತಾರೆ. ನಿಪಿ.5, 6 ಮತ್ತು 7ರಲ್ಲಿ ತನ್ನ ಸಹಿಗಳು ಇವೆ ಎಂದು ನುಡಿದು ಅವುಗಳನ್ನು

Visit **ecourts.gov.in** for updates or download mobile app "**eCourts Services**" from Android or iOS

ಕ್ರಮವಾಗಿ ನಿಪಿ.5(ಎ), 6(ಎ) ಮತ್ತು 7(ಎ) ಎಂದು ಗುರುತಿಸಿರುತ್ತಾರೆ. ಅವುಗಳಿಗೆ ಆರೋಪಿತರು ತನ್ನ ಮುಂದೆ ಸಹಿ ಮಾಡಿದ್ದಾರೆಂದು, ನಂತರ ಅಮಾನತ್ತು ಪಡಿಸಿಕೊಂಡ ಗಂಧದ ಕಟ್ಟಿಗೆ ಮತ್ತು ವಾಹನವನ್ನು ತಮ್ಮ ಕಚೇರಿಗೆ ತಂದೆವು ಎಂದು, ನಂತರ ಪ್ರಥಮ ವರ್ತಮಾನ ವರದಿ ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿದ್ದೆವೆಂದು ನುಡಿದಿರುತ್ತಾರೆ.

24. ಸದರಿ ಸಾಕ್ಷಿಯು ಮುಂದುವರೆದ ಮುಖ್ಯ ವಿಚಾರಣೆಯಲ್ಲಿ 3 ನೇ ಆರೋಪಿಯನ್ನು ಕರೆದುಕೊಂಡು ಸೀಗೋಡು ಗ್ರಾಮಕ್ಕೆ ಹೋದೆವು ಎಂದು, ಅಲ್ಲಿ ಆತನು 4 ನೇ ಆರೋಪಿಯ ಮನೆ ತೋರಿಸಿ ಅಲ್ಲಿಗೆ ಕರೆದುಕೊಂಡು ಹೋದ ಎಂದು, ಸದರಿ ಮನೆ 4 ನೇ ಆರೋಪಿಯ ಮಾವ ಮರಿಯಪ್ಪನಾಯಕನಿಗೆ ಸೇರಿದ್ದು, 4 ನೇ ಆರೋಪಿ ಅಲ್ಲಿ ವಾಸ ಮಾಡಿದ್ದಾನೆಂದು, ನ್ಯಾಯಾಲಯದ ಮುಂದಿರುವ ಪ್ರಕಾಶ್ ಆ ದಿನ ಅಲ್ಲಿದ್ದ ವ್ಯಕ್ತಿಯಾಗಿದ್ದಾನೆಂದು, 4 ನೇ ಆರೋಪಿಯನ್ನು ವಿಚಾರಿಸಲು ಪ್ರಾರಂಭಿಸಿದಾಗ ಅವನು ಓಡಿ ಹೋಗಲು ಪ್ರಾರಂಭಿಸಿದ ತಾವು ಆತನನ್ನು ಬೆನ್ನಟ್ಟಿ ಹಿಡಿಯಲು ಓಡಿದೆವು ಎಂದು, ಆತನು ಒಂದು ಪೊದೆಯ ಮೇಲೆ ಬಿದ್ದಾಗ ತಾವು ಹಿಡಿದುಕೊಂಡೆವೆಂದು, ನಂತರ ಮನೆಯ ಹತ್ತಿರ ಕರೆದುಕೊಂಡು ಬಂದೆವೆಂದು, ಅಲ್ಲಿ ಮತ್ತೆ ವಿಚಾರಿಸಲಾಗಿ ಆತನು ಹಿಂದಿನ ದಿನ ಮನೆಯ ಹತ್ತಿರ ತೋಟದಿಂದ ಗಂಧದ ಕಟ್ಟಿಗೆಯನ್ನು ಸದರಿ ವಾಹನದಲ್ಲಿ ತುಂಬಿಕಳಿಸಿದ್ದು, ನಿಜ ಅಂತ ಒಪ್ಪಿಕೊಂಡ ಎಂದು, ಅದೇ ವೇಳೆಗೆ 1 ರಿಂದ 3 ನೇ ಆರೋಪಿತರು ಮತ್ತು ಪರಾರಿ, 5 ನೇ ಆರೋಪಿ ಸೇರಿ ಈ ಕೆಲಸ ಮಾಡಿದ್ದು ಅಂತ ಹೇಳಿದ ಎಂದು, ಸದರಿ 5 ನೇ ಆರೋಪಿ ಮಂಜುನಾಥನ ಬಗ್ಗೆ ವಿಚಾರಿಸಲಾಗಿ ಬೆಳಿಗ್ಗೆ ಸಾಗರಕ್ಕೆ ಹೋಗಿದ್ದಾನೆ ಅಂತ ಹೇಳಿದರೆಂದು, ನಂತರ ಸದರಿ ಮನೆಯಿಂದ ಸುಮಾರು 100 ಮೀಟರ್

Visit **ecourts.gov.in** for updates or download mobile app "**eCourts Services**" from Android or iOS

ದೂರದಲ್ಲಿರುವ ಜಾಗವನ್ನು ತೋರಿಸಿದರೆಂದು, ಅಲ್ಲಿ ಗಂಧದ ಕಟ್ಟಿಗೆಯ ಕುರುಹುಗಳು ಕಂಡಬಂದವು ಮತ್ತು ಗಂಧದ ಕಟ್ಟಿಗೆಯ ಚೆಕ್ಕೆಗಳು ಬದ್ದಿದ್ದವು ಮತ್ತು ಒಂದು ಚಾರ್ ಮಿನಾರ್ ಸಿಗರೇಟ್ ಪ್ಯಾಕ್‌ನ ಹಾಳೆಯಲ್ಲಿ ಮೇಲ್ಕಾಣಿಸಿದ ವಾಹನ ಸಂಖ್ಯೆ ಎಂ.ಹೆಚ್ಃ12/ಕ್ಯೂಃ2357 ಬರೆದಿತ್ತು, ಆ ಬಗ್ಗೆ ಅಲ್ಲಿ ಒಂದು ಮಹಜರ್ ಕ್ರಮ ಜರುಗಿಸಿ, ಸ್ಥಳದಲ್ಲಿ ಕಂಡು ಬಂದ ಗಂಧದ ಚೆಕ್ಕೆ ಮತ್ತು ಸಿಗರೇಟ್ ಪ್ಯಾಕ್‌ನ ಹಾಳೆಯನ್ನು ಅಮಾನತುಪಡಿಸಿಕೊಂಡೆವೆಂದು ನುಡಿದು ನಿಪಿ.4, ಆ ದಿನ ಅಮಾನತುಪಡಿಸಿಕೊಂಡ ಸಿಗರೇಟ್ ಪ್ಯಾಕ್‌ನ ಹಾಳೆಯಾಗಿದೆ ಮತ್ತು ನಿಪಿ.2 ರಲ್ಲಿ ತಯಾರಿಸಿದ ಮಹಜರಾಗಿದೆ, ಅದರಲ್ಲಿ ತನ್ನ ಸಹಿ ಇದೆ ಎಂದು ನುಡಿದು ನಿಪಿ.2 ರಲ್ಲಿರುವ ತನ್ನ ಸಹಿಯನ್ನು ನಿಪಿ.2(ಡಿ) ಎಂದು ಗುರುತಿಸಿರುತ್ತಾರೆ. ಮುಂದುವರೆದು ಅದೇ ವೇಳೆಗೆ 4 ನೇ ಆರೋಪಿಯ ಹೇಳಿಕೆಯನ್ನು ದಾಖಲು ಮಾಡಿಕೊಂಡೆವೆಂದು, ಅದು ನಿಪಿ.8 ಆಗಿದ್ದು ಎಂದು ನುಡಿದು, ನಿಪಿ.8 ರಲ್ಲಿರುವ ತನ್ನ ಸಹಿಯನ್ನು ನಿಪಿ.8(ಎ) ಎಂದು ಗುರುತಿಸಿರುತ್ತಾರೆ. ಅದಕ್ಕೆ 4 ನೇ ಆರೋಪಿ ತನ್ನ ಸಮಕ್ಷಮ ಸಹಿ ಮಾಡಿದ್ದಾನೆಂದು, ನಿಪಿ.2 ನ್ನು ಬೆಳಿಗ್ಗೆ 10-00 ಗಂಟೆಯಿಂದ 11-00 ಗಂಟೆವರೆಗೆ ಮಾಡಿದ್ದೇವೆಂದು ನುಡಿದಿರುತ್ತಾರೆ. ಮುಂದುವರೆದು, ನಂತರ 4 ನೇ ಆರೋಪಿಯನ್ನು ದಸ್ತಗಿರಿ ಮಾಡಿ 1 ರಿಂದ 4 ನೇ ಆರೋಪಿತರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆಂದು ನುಡಿದಿರುತ್ತಾರೆ. ಆ ದಿನ ವಾಹನದಲ್ಲಿ ಅಮಾನತುಪಡಿಸಿಕೊಂಡ ಗಂಧದ ತುಂಡುಗಳನ್ನು ಗುರುತಿಸಬಲ್ಲೆ ಎಂದು ನುಡಿದು ನ್ಯಾಯಾಲಯದ ಮುಂದಿರುವ ಮುದ್ದೆ ಮಾಲು-1 ಮತ್ತು 2 ರಲ್ಲಿರುವ ಗಂಧದ ತುಂಡುಗಳು ಆ ದಿನ ಅಮಾನತುಪಡಿಸಿಕೊಂಡ ಗಂಧದ ತುಂಡುಗಳ ಪೈಕಿಯವುಗಳಾಗಿವೆಂದು, ಅದೇ ದಿನ ವಶಪಡಿಸಿಕೊಂಡ ಗಂಧದ ತುಂಡುಗಳನ್ನು

ಪ್ರಾಸಾ.1 ರವರ ಮುಂದೆ ಹಾಜರುಪಡಿಸಿ, ನಿಪಿ.3 ರಂತೆ ದೃಡೀಕರಣ ಪತ್ರ ಪಡೆದಿದ್ದೇನೆಂದು ನುಡಿದಿರುತ್ತಾರೆ. ಮುಂದುವರೆದು ನಂತರ ತನಿಖಾ ವರದಿಯನ್ನು ಡಿ.ಎಫ್.ಒ. ರವರಿಗೆ ಸಲ್ಲಿಸಿದ್ದು, ಅವರಿಂದ ಆರೋಪಿತರನ್ನು ಅಭಿಯೋಜನೆಗೆ ಗುರಿಪಡಿಸಲು ಅನುಮತಿ ಪಡೆದಿದ್ದೇನೆಂದು ನುಡಿದು ಸದರಿ ಅನುಮತಿ ಪತ್ರವನ್ನು ನಿಪಿ.9 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಪಿ.9(ಎ) ಎಂದು ಗುರುತಿಸಿರುತ್ತಾರೆ. ನಂತರ ತನಿಖೆ ಪೂರೈಸಿ, ದೋಷಾರೋಪಣಾ ಪತ್ರ ಸಲ್ಲಿಸಿದ್ದೇನೆಂದು, ಇನ್ನುಳಿದ ಗಂಧದ ತುಂಡುಗಳನ್ನು ನ್ಯಾಯಾಲಯದ ಅನುಮತಿ ಮೇರೆಗೆ ತನ್ನ ವಶದಲ್ಲಿಟ್ಟುಕೊಂಡಿದ್ದೇನೆಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

25. ಸದರಿ ಸಾಕ್ಷಿಯನ್ನು ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಿದಾಗ ಪಾಟೀ ಸವಾಲಿನಲ್ಲಿಃ

> **"ಆ ದಿನ ನಮಗೆ ಗಂಧದ ಕಳ್ಳ ಸಾಗಾಣಿಕೆಯ ಬಗ್ಗೆ ಯಾವುದೇ ವರ್ತಮಾನವಿರಲಿಲ್ಲ. ನಾವು ಗಸ್ತಿನ ಕರ್ತವ್ಯದ ಮೇಲೆ ಇರುವಾಗಲೇ ಆರೋಪಿತರನ್ನು ಹಿಡಿದಿದ್ದೇವೆ. 1 ಮತ್ತು 2 ನೇ ಆರೋಪಿತರನ್ನು ನಾನು ಹಿಂದಿ ಭಾಷೆಯಲ್ಲಿ ವಿಚಾರಿಸಿದೆ, ಅವರು ಹಿಂದಿ ಭಾಷೆಯಲ್ಲಿ ಹೇಳಿದ ಹೇಳಿಕೆಯನ್ನು ನಾನು ತರ್ಜುಮೆ ಮಾಡಿ ನಮ್ಮ ಸಿಬ್ಬಂದಿಗೆ ಹೇಳಿ ದಾಖಲು ಮಾಡಿಸಿದ್ದೇನೆ. ನಿಪಿ.5 ಮತ್ತು 6 ರಲ್ಲಿರುವ ಎಲ್ಲಾ ವಿಷಯವನ್ನು ನಾನು ಈಗ ಹಿಂದಿ ಭಾಷೆಗೆ ತರ್ಜುಮೆ ಮಾಡಬಲ್ಲೆ. ಆರೋಪಿತರು ಹಿಂದಿ ಭಾಷೆಯಲ್ಲಿ ಹೇಳಿದ ಹೇಳಿಕೆಯನ್ನು ಅರ್ಥ ಮಾಡಿಕೊಂಡು ನಾನು ಕನ್ನಡಕ್ಕೆ ತರ್ಜುಮೆ ಮಾಡಿದ್ದೇನೆ. ಅವರು ಹೇಳಿದ ಪ್ರತಿ ಶಬ್ದದ ಹಿಂದಿ ಭಾಷಾಂತರವನ್ನು ನಿಖರವಾಗಿ ನನಗೆ ಹೇಳಲು ಬರುವುದಿಲ್ಲ.**

ಸದರಿ ಹೇಳಿಕೆಗಳಿಗೆ ಬೇರೆ ಯಾವುದೇ ಸಾಕ್ಷಿದಾರರ ಸಹಿಗಳನ್ನು ನಾನು ಪಡೆದಿಲ್ಲ.

ಮುದ್ದೆ ಮಾಲು-1 ಮತ್ತು 2 ಪ್ರತ್ಯೇಕವಾಗಿ ಎಷ್ಟು ತೂಕವಿರುತ್ತದೆ ಅಂತ ಹೇಳಲು ಬರುವುದಿಲ್ಲ. ನಮಗೆ ಅನುಮಾನ ಬಂದ ನಂತರ ಬೇರೆ ಸಾಕ್ಷಿದಾರರನ್ನು ಕರೆಸಿ ಮುಂದಿನ ತನಿಖೆ ಮಾಡಲಿಲ್ಲ. ಅದೇ ರೀತಿ ಸದರಿ ಗಂಧದ ಕಟ್ಟಿಗೆ ಮತ್ತು ವಾಹನವನ್ನು ವಶಪಡಿಸಿಕೊಳ್ಳುವಾಗ ಸಹ ಬೇರೆ ಸಾಕ್ಷಿದಾರರು ಸಿಗಲಿಲ್ಲ. ಕಾರಣ ಅವರನ್ನು ಕರೆಯುವ ಪ್ರಶ್ನೆ ಬರಲಿಲ್ಲ.

ನಿಪಿ.4 ರಲ್ಲಿರುವ ವಾಹನ ಸಂಖ್ಯೆ ಬರೆದವರು ಯಾರು ಅಂತ ನನಗೆ ಗೊತ್ತಿಲ್ಲ. ನಿಪಿ.2 ರ ಸಮಯದಲ್ಲೂ ಬೇರೆ ಸಾಕ್ಷಿದಾರರನ್ನು ನಾವು ಕರೆದಿಲ್ಲ.

4 ನೇ ಆರೋಪಿ ಟೆಲಿಫೋನ್ ಇಲಾಖೆಯಲ್ಲಿ ನೌಕರ ಅಂತ ನಂತರ ಗೊತ್ತಾಯಿತು.

ನಾವು ವಶಪಡಿಸಿಕೊಂಡ ಗಂಧದ ತುಂಡುಗಳ ಬುಡ ಹುಡುಕಲು ಪ್ರಯತ್ನಿಸಿಲ್ಲ. "

26. ಈ ಮೇಲ್ಕಂಡ ಅಂಶವನ್ನು ಪರಿಶೀಲಿಸಲಾಗಿ, ಸದರಿ ಸಾಕ್ಷಿಯಿಂದಲೂ ಸಹ, 5 ನೇ ಆರೋಪಿಯ ಬಗ್ಗೆ ಹಾಗೂ ಆತ ಕೃತ್ಯದಲ್ಲಿ ಬಾಗಿಯಾಗಿದ್ದ ಎಂಬುದರ ಬಗ್ಗೆ ಸದರಿ ಸಾಕ್ಷಿಯಿಂದ ಯಾವುದೇ ಪೂರಕವಾದ ಅಂಶ ಹೊರಬಂದಿರುವುದಿಲ್ಲ. ಆದುದರಿಂದ ಆರೋಪಿತನ ಮೇಲಿನ ಆರೋಪಕ್ಕೆ ಸಂಬಂಧಪಟ್ಟಂತೆ ಸಂಶಯವ್ಯಕ್ತವಾಗುತ್ತದೆ.

27. ಮೇಲ್ಕಂಡ ಮೌಕಿಕ ಹಾಗೂ ದಸ್ತವೇಜು ಸಾಕ್ಷಿಗಳನ್ನು ಗಮನಿಸಿದಾಗ ಅಮಾನತ್ತು ಪಡಿಸಿಕೊಂಡ ಬಗ್ಗೆ ನುಡಿದಂತಹ ಸಾಕ್ಷಿದಾರರು ಅರಣ್ಯ ಇಲಾಖೆಯ ಅಧಿಕಾರಿಗಳಾಗಿದ್ದು, ಹಿತಾಸಕ್ತಿವುಳ್ಳ ಸಾಕ್ಷಿದಾರರಾಗಿರುತ್ತಾರೆ. ಅಲ್ಲದೇ ಪ್ರಸ್ತುತ ಪ್ರಕರಣದ ಆರೋಪಿಯು ಕೃತ್ಯದಲ್ಲಿ ಬಾಗಿಯಾಗಿದ್ದರ ಬಗ್ಗೆ ಯಾವುದೇ ಪೂರಕ ಅಂಶಗಳು ಹೊರಬಂದಿರುವುದಿಲ್ಲ. ಸ್ವತಂತ್ರ ಪಂಚನಾಮ ಸಾಕ್ಷ್ಯ ಇಲ್ಲದೇ ಕೇವಲ ಅರಣ್ಯ ಅಧಿಕಾರಿಗಳ ಸಾಕ್ಷ್ಯವನ್ನು ನಂಬಲು ಕಷ್ಟ ಸಾಧ್ಯವಾಗಿರುತ್ತದೆ. ಆದ್ದರಿಂದ ಆರೋಪಿಯು ಅನುಮಾನದ ಲಾಭವನ್ನು ಪಡೆಯಲು ಅರ್ಹರಾಗಿರುತ್ತಾರೆ. ಈ ಮೇಲೆ ಚರ್ಚಿಸಿದ ಎಲ್ಲಾ ವಿಷಯಗಳಿಗನುಗುಣವಾಗಿ ಆರೋಪಿಯ ವಿರುದ್ಧ ಮಾಡಲಾದ ಆರೋಪಗಳನ್ನು ಸಂಶಯಾತೀತವಾಗಿ ರುಜುವಾತು ಪಡಿಸಲು ಅಭಿಯೋಜನೆಯು ವಿಫಲವಾಗಿರುತ್ತದೆ. ಆದ್ದರಿಂದ **ಅಂಶ-1 ನ್ನು ನಕರಾತ್ಮಕವಾಗಿ ಉತ್ತರಿಸಲಾಗಿದೆ.**

28. **<u>ಅಂಶ -2:-</u>** ಈ ಮೇಲ್ಕಂಡ ಅಂಶದ ಮೇಲಿನ ಚರ್ಚೆಯ ಮೇಲೆ ಬಂದ ನಿರ್ಣಯದಂತೆ ಈ ನ್ಯಾಯಾಲಯವು ಕೆಳಕಂಡ ಆದೇಶವನ್ನು ಮಾಡಿರುತ್ತದೆ.

## <u>ಆದೇಶ</u>

ದಂ. ಪ್ರ. ಸಂ. ಕಲಂ 248(1) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿಯ ವಿರುದ್ಧ ಮಾಡಲಾದ ಕರ್ನಾಟಕ ಅರಣ್ಯ ಕಾಯ್ದೆ ಕಲಂ 86 ಮತ್ತು 87 ಸಹ ಕಲಂ ಭಾ.ದಂ. ಸಂ. ಕಲಂ 379 ರ ಆರೋಪಗಳಿಂದ

ಆರೋಪಿಯನ್ನು ಈ ಮೊಕದ್ದಮೆಯಿಂದ ನ್ಯಾಯಾಲಯವು ದೋಷಮುಕ್ತರನ್ನಾಗಿ ಖುಲಾಷೆಗೊಳಿಸಿರುತ್ತದೆ.

ಪ್ರಕರಣದಲ್ಲಿ ಆರೋಪಿ ಮತ್ತು ಅವರ ಜಾಮೀನುದಾರರು ದಂಡ ಪ್ರಕ್ರಿಯೆ ಸಂಹಿತೆ 437(ಎ)ರ ಅಡಿಯಲ್ಲಿ ಬರೆದುಕೊಟ್ಟಂತಹ ಜಾಮೀನು ಮುಚ್ಚಳಿಕೆಗಳು ಈ ದಿನದಿಂದ 6 ತಿಂಗಳ ವರೆಗೆ ಚಾಲ್ತಿಯಲ್ಲಿರುತ್ತವೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕ ಯಂತ್ರದ ಮೇಲೆ ನೇರ ಉಕ್ತಲೇಖನ ಕೊಟ್ಟು ಬೆರಳಚ್ಚು ಮಾಡಿದ ನಂತರ ಅದನ್ನು ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 27 ನೇ ಜುಲೈ 2026 ರಂದು ನಾನು ಘೋಷಿಸಿದ್ದೇನೆ.)

ಸಹಿ/- xxxxx27/07/2026
(ಶ್ರೀಮತಿ ನಂದಿನಿ ಎಂ.ಎನ್.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಕೊಪ್ಪ.

## ಅನುಬಂಧ

### ಅಭಿಯೋಜನೆ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿಃ

| | | |
|---|---|---|
| ಪ್ರಾಸಾ-1ಃ | ಹೆಚ್.ಆರ್. ಕುಮಾರ್ | 05.09.1995 |
| ಪ್ರಾಸಾ-2ಃ | ಎ.ಡಿ. ಪ್ರಕಾಶ್ | 05.09.1995 |
| ಪ್ರಾಸಾ-3ಃ | ಟಿ.ಬಿ. ಬೋಜರಾಜು | 19.09.1995 |
| ಪ್ರಾಸಾ-4ಃ | ಪಿ. ಸುರೇಶ್ ಶೆಟ್ಟಿ | 10.10.1995 |

### ಆರೋಪಿ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿಃ

- ಇಲ್ಲಾ -

### ಅಭಿಯೋಜನೆ ಪರ ಗುರುತಿಸಿದ ದಾಖಲೆಗಳುಃ

ನಿಪಿ-1 ಃ ದೂರು

Visit **ecourts.gov.in** for updates or download mobile app "**eCourts Services**" from Android or iOS

| | |
|---|---|
| ನಿಪಿ-1(ಎ)-(ಡಿ}ಃ | ಸಹಿಗಳು |
| ನಿಪಿ-2 ಃ | ಸ್ಥಳ ಮಹಜರ್ |
| ನಿಪಿ-1(ಎ)-(ಡಿ}ಃ | ಸಹಿಗಳು |
| ನಿಪಿ-3 ಃ | ಶ್ರೀಗಂಧದ ಪರೀಕ್ಷಾ ಪ್ರಮಾಣಪತ್ರ |
| ನಿಪಿ-3(ಎ): | ಸಹಿ |
| ನಿಪಿ-4ಃ | ಚಾರ್ ಮಿನಾರ್ ಸಿಗರೇಟ್ ಪ್ಯಾಕೇಟ್ ಪೇಪರ್ |
| ನಿಪಿ-5ಃ | 1 ನೇ ಆರೋಪಿಯ ಹೇಳಿಕೆ |
| ನಿಪಿ-5(ಎ): | ಸಹಿ |
| ನಿಪಿ-6ಃ | 2 ನೇ ಆರೋಪಿಯ ಹೇಳಿಕೆ |
| ನಿಪಿ-6(ಎ): | ಸಹಿ |
| ನಿಪಿ-7ಃ | 3 ನೇ ಆರೋಪಿಯ ಹೇಳಿಕೆ |
| ನಿಪಿ-7(ಎ): | ಸಹಿ |
| ನಿಪಿ-8ಃ | 4 ನೇ ಆರೋಪಿಯ ಹೇಳಿಕೆ |
| ನಿಪಿ-8(ಎ): | ಸಹಿ |
| ನಿಪಿ-9ಃ | ವರದಿ |
| ನಿಪಿ-9(ಎ): | ಸಹಿ |

**ಆರೋಪಿ ಪರ ಗುರುತಿಸಿದ ದಾಖಲೆಗಳುಃ**

-ಇಲ್ಲಾ -

**ಗುರುತಿಸಲಾದ ಮುದ್ದೆಮಾಲುಗಳುಃ**

ಮುದ್ದೆ ಮಾಲು-1ಃ ಒಂದು ದೊಡ್ಡ ಶ್ರೀಗಂಧದ ಬಿಲ್ಲೆಟ್ ಸಂಖ್ಯೆ-1.

ಮುದ್ದೆ ಮಾಲು-2ಃ ಒಂದು ಚಿಕ್ಕ ಶ್ರೀಗಂಧದ ಬಿಲ್ಲೆಟ್ ಸಂಖ್ಯೆ-196.

ಸಹಿ/- xxxxx27/07/2026

(ಶ್ರೀಮತಿ ನಂದಿನಿ ಎಂ.ಎನ್.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಕೊಪ್ಪ.

M N NANDINI
Digitally signed by M N NANDINI
Date: 2026.08.11 17:07:14 +0530